27/09/2015 2015 91 2015

EXAMINATION CODE : 06A TET-II

ಪ್ರಶ್ನೆಪತ್ರಿಕೆ ಪುಸ್ತಿಕೆ ಕ್ರಮಸಂಖ್ಯೆ

4278702

| ಜಿಲ್ಲಾ ಸಂಕೇತ | | ನೋಂದಣಿ ಸಂಖ್ಯೆ | | | | | | | |
|---|---|---|---|---|---|---|---|---|---|
| | | | | | | | | | |

KMSS

# ಪ್ರಶ್ನೆ ಪತ್ರಿಕೆ ಪುಸ್ತಿಕೆ-ಪತ್ರಿಕೆ-II

## (ಕನ್ನಡ ಮಾಧ್ಯಮದ ಸಮಾಜ ವಿಜ್ಞಾನ ಅಭ್ಯರ್ಥಿಗಳಿಗೆ)

ವಿಷಯಗಳು : ಭಾಷೆ 1: (ಕನ್ನಡ, ಇಂಗ್ಲೀಷ್, ಉರ್ದು, ತಮಿಳು, ತೆಲುಗು, ಮರಾಠಿ, ಹಿಂದಿ, ಸಂಸ್ಕೃತ)

ಭಾಷೆ 2: (ಕನ್ನಡ, ಇಂಗ್ಲೀಷ್, ಉರ್ದು, ತಮಿಳು, ತೆಲುಗು, ಮರಾಠಿ, ಹಿಂದಿ, ಸಂಸ್ಕೃತ)

ಬಾಲವಿಕಾಸ ಮತ್ತು ಪೆಡಗಾಗಿ, ಸಮಾಜ ವಿಜ್ಞಾನ

ಗರಿಷ್ಠ ಅಂಕಗಳು : 150    02.00 P.M To 04.30 P.M    ಗರಿಷ್ಠ ಅವಧಿ : 2.30 ಗಂಟೆಗಳು

### ಅಭ್ಯರ್ಥಿಗಳಿಗೆ ಸೂಚನೆಗಳು (ಪ್ರಶ್ನೆಪತ್ರಿಕೆಯಲ್ಲಿನಎಲ್ಲಾಸೂಚನೆಗಳನ್ನುದಂಯವಿಟ್ಟು ಓದಿ)

1. ಮೊಹರು ಮಾಡಲಾದ / ಪ್ಲಾಸ್ಟಿಕ್ ಕವರ್‌ನಲ್ಲಿ ಇಟ್ಟಿರುವ ಪ್ರಶ್ನೆಪತ್ರಿಕೆ ಪುಸ್ತಿಕೆಯು 150 ಬಹುಆಯ್ಕೆಯ ಪ್ರಶ್ನೆಗಳನ್ನು ಹಾಗೂ ಬಿಡಿ ಓ.ಎಂ.ಆರ್. ಉತ್ತರಪತ್ರಿಕೆಯನ್ನು ಒಳಗೊಂಡಿರುತ್ತದೆ. ಪ್ರಶ್ನೆಪತ್ರಿಕೆ ಪುಸ್ತಿಕೆಯು ಅಭ್ಯರ್ಥಿಯು ಆಯ್ಕೆ ಮಾಡಿಕೊಂಡಿರುವ ಪತ್ರಿಕೆ / ಮಾಧ್ಯಮಕ್ಕೆ ಸಂಬಂಧಿಸಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು.
2. ಈ ಪ್ರಶ್ನೆ ಪತ್ರಿಕೆಯು ಭಾಗ-I, ಭಾಗ-II, ಭಾಗ-III, ಭಾಗ-IV ಎಂದು ಒಟ್ಟು 4 ಭಾಗಗಳನ್ನು ಹೊಂದಿದ್ದು, 150 ಬಹು ಆಯ್ಕೆ ಪ್ರಶ್ನೆಗಳನ್ನು ಹೊಂದಿರುತ್ತದೆ. ಪ್ರತಿ ಪ್ರಶ್ನೆಗೂ ಒಂದು ಅಂಕ ನಿಗದಿಪಡಿಸಲಾಗಿದೆ.
   ಭಾಗ-I ಭಾಷೆ 1:(ಕನ್ನಡ,ಇಂಗ್ಲೀಷ್,ಉರ್ದು,ತಮಿಳು,ತೆಲುಗು,ಮರಾಠಿ,ಹಿಂದಿ,ಸಂಸ್ಕೃತ)(ಪ್ರಶ್ನೆಸಂಖ್ಯೆ 1ರಿಂದ 30)
   ಭಾಗ-II ಭಾಷೆ 2:(ಕನ್ನಡ,ಇಂಗ್ಲೀಷ್,ಉರ್ದು,ತಮಿಳು,ತೆಲುಗು,ಮರಾಠಿ,ಹಿಂದಿ,ಸಂಸ್ಕೃತ)(ಪ್ರಶ್ನೆಸಂಖ್ಯೆ 31ರಿಂದ 60)
   ಭಾಗ-III: ಬಾಲವಿಕಾಸ ಮತ್ತು ಪೆಡಗಾಗಿ (ಪ್ರಶ್ನೆಸಂಖ್ಯೆ 61ರಿಂದ 90)
   ಭಾಗ-IV: ಸಮಾಜ ವಿಜ್ಞಾನ (ಪ್ರಶ್ನೆಸಂಖ್ಯೆ 91ರಿಂದ 150)
3. ಭಾಗ-Iರಲ್ಲಿಭಾಷೆ-1ವಿಷಯಕ್ಕೆಸಂಬಂಧಿಸಿದಂತೆ 30 ಪ್ರಶ್ನೆಗಳನ್ನುಮತ್ತುಭಾಗ-IIರಲ್ಲಿಭಾಷೆ-2ವಿಷಯಕ್ಕೆಸಂಬಂಧಿಸಿದಂತೆ 30ಪ್ರಶ್ನೆಗಳನ್ನು ಹೊಂದಿರುತ್ತದೆ. ಈಪ್ರಶ್ನೆಪತ್ರಿಕೆಪುಸ್ತಿಕೆಯಲ್ಲಿಎಲ್ಲಾಭಾಷೆಗಳಿಗೂಸಂಬಂಧಿಸಿದಂತೆಪ್ರಶ್ನೆಗಳುಇರುತ್ತವೆ. ಆದರೆಅಭ್ಯರ್ಥಿಗಳುಅರ್ಜಿಯಲ್ಲಿ ಆಯ್ಕೆ ಮಾಡಿಕೊಂಡಿರುವ / ಪ್ರವೇಶ ಪತ್ರದಲ್ಲಿ ನಮೂದಿಸಿರುವ ಭಾಷೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಭಾಷೆ-1 ಮತ್ತು ಭಾಷೆ-2 ಕ್ಕೆ ಉತ್ತರಿಸುವುದು ಕಡ್ಡಾಯವಾಗಿರುತ್ತದೆ.
4. ಅಭ್ಯರ್ಥಿಗಳು ಭಾಗ-II ರಲ್ಲಿನ ಭಾಷೆ-2 ಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಉತ್ತರಿಸುವಾಗ ಭಾಷೆ-1 ನ್ನು (ಭಾಗ-I) ಹೊರತುಪಡಿಸಿ ಇತರೆ ಭಾಷೆಯನ್ನುಆಯ್ಕೆಮಾಡಿಕೊಂಡುಉತ್ತರಿಸಬೇಕು.
5. ಈ ಪ್ರಶ್ನೆ ಪತ್ರಿಕೆ ಪುಸ್ತಿಕೆಯಲ್ಲಿ ಭಾಗ-III, ಭಾಗ-IV ಕ್ಕೆಸಂಬಂಧಿಸಿದಂತೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ಮಾಧ್ಯಮಗಳಲ್ಲಿ ಪ್ರಶ್ನೆಗಳನ್ನು ನೀಡಲಾಗಿದೆ. ಅಭ್ಯರ್ಥಿಗಳುತಮ್ಮಅರ್ಜಿಯಲ್ಲಿಆಯ್ಕೆಮಾಡಿಕೊಂಡಿರುವ/ಪ್ರವೇಶಪತ್ರದಲ್ಲಿನಮೂದಿಸಿರುವಮಾಧ್ಯಮದಪ್ರಶ್ನೆಗಳಿಗೆಮಾತ್ರ ಉತ್ತರ ನೀಡಬೇಕು.
6. ಪ್ರಶ್ನೆಪತ್ರಿಕೆ ಪುಸ್ತಿಕೆಯ ಸೀಲನ್ನು ಅತೀ ಜಾಗರೂಕತೆಯಿಂದ ಬಿಡಿಸಿ, ಅಡಕವಾಗಿರುವ ಬಿಡಿ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಹೊರತೆಗೆಯುವುದು. ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿನ ಕ್ರಮಸಂಖ್ಯೆ 1 ರಿಂದ 13 ರವರೆಗಿನ ಎಲ್ಲಾ ಮಾಹಿತಿಯನ್ನು ಅತೀ ಜಾಗರೂಕತೆಯಿಂದ ಭರ್ತಿ ಮಾಡುವುದು. ಭರ್ತಿ ಮಾಡದೇ ಖಾಲಿ ಉಳಿದ ಸಂದರ್ಭದಲ್ಲಿ ಮೌಲ್ಯಮಾಪನದಲ್ಲಿ ಉಂಟಾಗುವ ತೊಡಕು ಮತ್ತು ಪರಿಣಾಮಗಳಿಗೆ ಅಭ್ಯರ್ಥಿಗಳೇ ನೇರ ಹೊಣೆಗಾರರಾಗಿರುತ್ತಾರೆ.
7. ಓ.ಎಂ.ಆರ್. ಉತ್ತರಪತ್ರಿಕೆಯು ಕಾರ್ಬನ್ ಸಹಿತ ಪ್ರತಿಯನ್ನು ಒಳಗೊಂಡಿರುತ್ತದೆ. ಪರೀಕ್ಷಾ ಅವಧಿ ಮುಗಿದ ನಂತರ, ಉತ್ತರಿಸಿದ ಮೂಲ ಓ.ಎಂ.ಆರ್. ಉತ್ತರಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸತಕ್ಕದ್ದು. ಕಾರ್ಬನ್ ರಹಿತ ಪ್ರತಿಯನ್ನು ಅಭ್ಯರ್ಥಿಯು ಇಟ್ಟುಕೊಳ್ಳಬೇಕು.
8. ಪರೀಕ್ಷಾ ಕೊಠಡಿಯೊಳಗೆ ಕ್ಯಾಲ್ಕುಲೇಟರ್, ಮೊಬೈಲ್ ಹಾಗೂ ಇತರೆ ವಿದ್ಯುನ್ಮಾನ ಉಪಕರಣಗಳ ಬಳಕೆಯನ್ನು ನಿಷೇಧಿಸಿದೆ.
9. ಪರೀಕ್ಷಾ ಸಮಯದಲ್ಲಿ ಯಾವುದೇ ರೀತಿಯ ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಯ ಮೇಲೆ ಪರೀಕ್ಷಾ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು.
10. ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿಪ್ರತಿಪ್ರಶ್ನೆಗೆಸರಿಹೊಂದುವಉತ್ತರವನ್ನುಗುರುತಿಸಲುನೀಡಲಾಗಿರುವನಾಲ್ಕುವೃತ್ತಗಳಪೈಕಿಸರಿಯಾದ ವೃತ್ತವನ್ನುನೀಲಿ/ಕಪ್ಪು ಶಾಯಿಯಬಾಲ್‌ಪಾಯಿಂಟ್‌ಪೆನ್‌ಮಾತ್ರಉಪಯೋಗಿಸಿಗುರುತುಮಾಡುವುದು. ಉತ್ತರವನ್ನುತುಂಬಿದಮೇಲೆ ಬದಲಿಸಲುಪ್ರಯತ್ನಿಸಬೇಡಿ.

## PART – I
## LANGUAGE – I : KANNADA

ಸೂಚನೆ : ಈ ಕೆಳಗಿನ ಗದ್ಯವನ್ನು ಓದಿ ಮುಂದೆ ಕೊಟ್ಟಿರುವ 1 ರಿಂದ 8 ಪ್ರಶ್ನೆಗಳಿಗೆ ಉತ್ತರಿಸಿ.

ಈಗಿನ ದಿನಗಳಲ್ಲಿ ಎಷ್ಟೋ ಮಂದಿ ತಂದೆತಾಯಂದಿರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಹಣ ವೆಚ್ಚ ಮಾಡಲು ಹಿಂಜರಿಯುವುದಿಲ್ಲ. ಮಕ್ಕಳ ಭವಿಷ್ಯ ಭವ್ಯವಾಗಬೇಕೆಂಬ ಅವರ ಕನಸು ಸಹಜವಾದುದೇ. ಆದರೆ ತಮ್ಮ ಮಕ್ಕಳು ಕಲಿಕೆಯ ಸಮಯದಲ್ಲಿ ಎಂಥ ಯೋಚನೆ ಭಾವನೆಗಳನ್ನು ಸಂಗ್ರಹಿಸುತ್ತಿದ್ದಾರೆ, ಎಂಥ ಅಭ್ಯಾಸಗಳನ್ನು ರೂಢಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಕುರಿತು ಅವರು ಜಾಗರೂಕರಾಗಿದ್ದಾರೆಯೇ ? ಓದು ಬರಹ ಕಲಿತ ಮಕ್ಕಳು ಜೀವನ ಸಂಗ್ರಾಮವನ್ನು ಎದುರಿಸಲು ಸಹಾಯಕವಾಗುವ ವಿಚಾರಗಳಿಗಿಂತಲೂ ಮನುಷ್ಯರ ದೌರ್ಬಲ್ಯಗಳನ್ನು ರಂಜಕವಾಗಿ ತೋರಿಸುವ, ವರ್ಣಿಸುವ ಅಸಂಖ್ಯ ಚಲನಚಿತ್ರ ಮತ್ತು ಬರಹಗಳಿಂದ ಸಾಕಷ್ಟು ಪ್ರಭಾವಿತ-ರಾಗುತ್ತಾರೆ. ಸಂಶೋಧಕ ವಿಜ್ಞಾನಿಗಳ, ಸಾಹಸೀ ಉದ್ಯಮಶೀಲ ವ್ಯಕ್ತಿಗಳ, ಸ್ವಾರ್ಥ ತ್ಯಾಗಿಗಳ, ಕರ್ಮವೀರರ, ದೇಶಪ್ರೇಮಿ ಸಮಾಜಸೇವಕರ, ದೈವವನ್ನು ನೆಚ್ಚಿ ಬದುಕಿದ ಸಾಧು ಸಂತರ ಜೀವನ ಸಂದೇಶಗಳನ್ನು ಅವರು ಓದುವುದೇ ಇಲ್ಲವೆಂದರೂ ಸಲ್ಲುವುದು. ಮನುಷ್ಯರ ಶೀಲ ಸಂವರ್ಧನೆಗೆ ಬೇಕಾಗುವ ಸಾಮಗ್ರಿಗಳನ್ನು ಬೆಳವಣಿಗೆಯ ಅತ್ಯುತ್ತಮ ಸಮಯದಲ್ಲಿ ಮಕ್ಕಳಿಗೆ ನೀಡಲಾಗದಿರುವುದು ಒಂದು ದೊಡ್ಡ ದೌರ್ಭಾಗ್ಯ ಮಾತ್ರವಲ್ಲ, ನಮ್ಮ ಶಿಕ್ಷಣ ತಜ್ಞರೆನ್ನಿಸಿಕೊಂಡವರ, ಹೆತ್ತವರ ಅಸಹಾಯಕತೆ ಅಥವಾ ದೂರದರ್ಶಿತ್ವದ ಅಭಾವಕ್ಕೆ ಹಿಡಿದ ಕನ್ನಡಿಯೂ ಹೌದು. ವ್ಯಕ್ತಿಯ ಚಾರಿತ್ರ್ಯ ನಿರ್ಮಾಣದಲ್ಲಿ ಯೋಚನೆ ಮತ್ತು ಒಳ್ಳೆಯ ಸಂಸ್ಕಾರಗಳನ್ನು ನಿರ್ಮಿಸುವ ಅಭ್ಯಾಸಗಳ ಪಾತ್ರದ ಮೌಲ್ಯ ಮಹಾತ್ಮೆಗಳನ್ನು ತಿಳಿದವರಿಗೆ ಮಾತ್ರ ಈ ಮಾತು ಅರ್ಥವಾದೀತು.

ಅಭ್ಯಾಸಗಳು ಮೊದಲಿಗೆ ಜೇಡನ ಬಲೆಯ ನೂಲಿನಂತೆ. ಆದರೆ ಬರಬರುತ್ತ ಕಬ್ಬಿಣದ ತಂತಿಗಳಂತೆ ನಮ್ಮನ್ನು ಬಲವಾಗಿ ಹಿಡಿದುಕೊಳ್ಳುತ್ತವೆ ಎನ್ನುವ ಗಾದೆ ಬಾಲ್ಯದಿಂದಲೇ ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳುವ ಆವಶ್ಯಕತೆಯನ್ನು ಸಾರುತ್ತದೆ. ಎಲ್ಲ ಅಭ್ಯಾಸಗಳಿಗಿಂತಲೂ ಅತ್ಯಂತ ಪ್ರಮುಖವಾದ ಅಭ್ಯಾಸ ಯಾವುದು ? 'ಒಂದು ಒಳ್ಳೆಯ ಅಭ್ಯಾಸವನ್ನು ರೂಢಿಸಿಕೊಳ್ಳಲು ನಾವು ಬೆಳೆಸಿಕೊಳ್ಳಬೇಕಾದ ಎಚ್ಚರ ಅಥವಾ ಜಾಗರೂಕತೆಯ ಅಭ್ಯಾಸ'. ಒಳ್ಳೆಯತನದಲ್ಲಿ ವಿಶ್ವಾಸ, ಒಳ್ಳೆಯಯವನಾಗಬೇಕೆಂಬ ಸಂಕಲ್ಪಗಳೇ ನಮ್ಮನ್ನು ದೋಷಮುಕ್ತರನ್ನಾಗಿ ಮಾಡುವ ಶಕ್ತಿಯನ್ನು ನೀಡುವುದಿಲ್ಲ. ನಾವು ರೂಢಿಸಿಕೊಂಡ ಬೇಡದ ಅಭ್ಯಾಸಗಳನ್ನು ಮುರಿಯಬೇಕು. ಹೊಸ ಅಭ್ಯಾಸಗಳನ್ನು ನಮ್ಮದಾಗಿ ಮಾಡಿಕೊಳ್ಳಬೇಕು. ವ್ಯಕ್ತಿಯೊಬ್ಬ ಇಪ್ಪತ್ತರಿಂದ ಮೂವತ್ತು ವರ್ಷ ವಯಸ್ಸಿನೊಳಗೆ ಬುದ್ಧಿಶಕ್ತಿಯ ಬೆಳವಣಿಗೆ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಅಭ್ಯಾಸಗಳನ್ನು ಸಂಗ್ರಹ ಮಾಡಿರುತ್ತಾನೆ. ವೈಯಕ್ತಿಕ ಶುಚಿತ್ವದ ನಿಯಮ, ಮಾತು ಮತ್ತು ಉಚ್ಚಾರಣೆಯ ವಿಧಾನ, ಹಾವಭಾವ, ಅಂಗಚೇಷ್ಟೆ ನಡೆ--ಇವುಗಳನ್ನು ಇಪ್ಪತ್ತರೊಳಗೆ ಕಲಿತು ಬಿಡುತ್ತಾನೆ ಎನ್ನುತ್ತಾರೆ.

'ಕೆಲವೆ ದಿನಗಳಲ್ಲಿ ನಡೆದಾಡುವ ಅಭ್ಯಾಸದ ಮೂಟೆಗಳು ನಾವಾಗುತ್ತೇವೆ' ಎಂಬುದನ್ನು ಬದುಕಿಗೆ ರೂಪ ನೀಡಲು ಸಾಧ್ಯವಾಗುವ ಬಾಲ್ಯಕಾಲದಲ್ಲೇ ಚಿಕ್ಕವರು ತಿಳಿದುಕೊಂಡರೆ ಅವರು ತಮ್ಮ ನಡತೆಯ ಕಡೆಗೆ ಹೆಚ್ಚು ಗಮನವೀಯಬಲ್ಲರು. 'ಎಂದೆಂದೂ ಬದಲಿಸಲಾಗದ ಅದೃಷ್ಟವನ್ನು ನಾವು ನಿತ್ಯವೂ ಹೆಣೆಯುತ್ತಿರುತ್ತೇವೆ' ಎಂದು ಮನೋವಿಜ್ಞಾನಿ ಹೇಳುತ್ತಾನೆ. ಆದುದರಿಂದ ಅಕ್ಷರ ವಿದ್ಯೆಯ ಜೊತೆಗೆ ಬದುಕನ್ನು ಹಸನಾಗಿಸುವ ವಿವಿಧ ಸಂಸ್ಕಾರಗಳ ನಿರ್ಮಾಣದ ಕಡೆಗೂ ಹೆತ್ತವರೂ, ಶಿಕ್ಷಕರೂ ಎಷ್ಟೊಂದು ಗಮನವೀಯಬೇಕು !

1. ಮಕ್ಕಳ ಚಾರಿತ್ರ್ಯ ನಿರ್ಮಾಣದಲ್ಲಿ ಪ್ರಭಾವಿಸುವ ಮುಖ್ಯ ಅಂಶಗಳು
   (1) ಜ್ಞಾನಾರ್ಜನೆಯಲ್ಲಿ ಅವರು ಗಳಿಸುವ ಪರಿಣಿತಿ.
   (2) ಅವರು ವಿಜ್ಞಾನ-ತಂತ್ರಜ್ಞಾನದಲ್ಲಿ ಸಾಧಿಸುವ ಕುಶಲತೆ.
   (3) ಶ್ರೀಮಂತ ಉದ್ಯಮಶೀಲ ವ್ಯಕ್ತಿಗಳೊಂದಿಗಿನ ಅನುಭವಗಳು.
   (4) ಸದ್ ಯೋಚನೆ ಮತ್ತು ಸಂಸ್ಕಾರ ರೂಪಿಸುವ ಚಟುವಟಿಕೆಗಳು.

2. ಪ್ರಸ್ತುತ ಸಮಾಜದಲ್ಲಿ ಬಹುತೇಕ ಪಾಲಕರು ತಮ್ಮ ಮಕ್ಕಳ ಶಿಕ್ಷಣದ ಬಗೆಗೆ ಅಷ್ಟಾಗಿ ಪರಿಗಣಿಸದ ಅಂಶ.
   (1) ಮಕ್ಕಳು ಉತ್ತಮ ಯೋಚನೆ ಮತ್ತು ಭಾವನೆಗಳನ್ನು ಗಳಿಸಿಕೊಳ್ಳಲೆಂಬುದು
   (2) ವಿಜ್ಞಾನ, ತಂತ್ರಜ್ಞಾನ ಕೋರ್ಸುಗಳಿಗೆ ಹೋಗಬೇಕೆಂಬ ಇಚ್ಛೆ
   (3) ಮಕ್ಕಳು ಹೊರದೇಶಗಳಿಗೆ ಹೋಗಿ ದುಡಿದು ತರಬೇಕೆಂಬ ಆಶೆ
   (4) ಮಕ್ಕಳು ಉನ್ನತ ಹುದ್ದೆಗೆ ಹೋಗಿ ಹಣ ಅಧಿಕಾರ ಗಳಿಸಬೇಕೆಂಬ ಆಶೆ
3. ಮಕ್ಕಳ ಶಿಕ್ಷಣದಲ್ಲಿ ಮುಖ್ಯವಾಗಿ ಗಳಿಸಿಕೊಳ್ಳಬೇಕಾದ ಅಂಶಗಳು
   (1) ಉದ್ಯಮಶೀಲರಾಗಿ ರೂಪಗೊಳ್ಳುವ ಜ್ಞಾನ
   (2) ಪರೀಕ್ಷೆಗಳಲ್ಲಿ ಉನ್ನತ ಸ್ಥಾನ ಗಳಿಸಲು ಅಗತ್ಯ ಸ್ಥಾನ ಗಳಿಸಲು
   (3) ಜೀವನದಲ್ಲಿ ಎದುರಾಗುವ ಸಮಸ್ಯೆ ಸವಾಲುಗಳನ್ನು ಎದುರಿಸುವ ವಿಷಯಗಳು
   (4) ಜ್ಞಾನ ಮತ್ತು ಸಂಪತ್ತು ಗಳಿಕೆಯ ವಿಷಯಗಳು
4. ಮಕ್ಕಳ ಶಿಕ್ಷಣದಲ್ಲಿ ಇದು ಹೆತ್ತವರ ಹಾಗೂ ತಜ್ಞರ ಅಸಹಾಯಕತೆಗೆ ಹಿಡಿದ ಕನ್ನಡಿಯಾಗಿದೆ.
   (1) ಮಕ್ಕಳ ಚಾರಿತ್ರ್ಯ ನಿರ್ಮಾಣಕ್ಕೆ ಅಗತ್ಯವಾದ ವಿಷಯಗಳನ್ನು ಒದಗಿಸದಿರುವುದು
   (2) ಉನ್ನತ ಮಟ್ಟದ ಜ್ಞಾನವನ್ನು ಕಟ್ಟಿಕೊಳ್ಳುವ ಚಟುವಟಿಕೆಗಳನ್ನು ಕಲ್ಪಿಸದಿರುವುದು
   (3) ಮಕ್ಕಳಲ್ಲಿ ಉದ್ಯಮಶೀಲ ಸಾಮರ್ಥ್ಯಗಳನ್ನು ಕಟ್ಟಿಕೊಡದಿರುವುದು
   (4) ಮಕ್ಕಳಲ್ಲಿ ಜ್ಞಾನದಾನ ಹಾಗೂ ಸ್ಪರ್ಧಾತ್ಮಕ ಭಾವನೆ ಹುಟ್ಟಿ ಹಾಕದಿರುವುದು
5. "ಎಂದೆಂದಿಗೂ ಬದಲಿಸಲಾಗದ ಅದೃಷ್ಟವನ್ನು ನಾವು ನಿತ್ಯವು ಹೆಣೆಯುತ್ತಿರುತ್ತೇವೆ" ಈ ಮಾತು ಪ್ರಕಟಿಸುವ ಅರ್ಥ :
   (1) ಅಭ್ಯಾಸಗಳನ್ನು ನಿರಂತರ ಬದಲಾಯಿಸಿ ಹೊಸದಾಗಿ ಕಲಿಯುವುದು.
   (2) ಅಭ್ಯಾಸಗಳನ್ನು ಜೇಡರ ಬಲೆಯ ರೀತಿ ನಿತ್ಯನೂತನವಾಗಿ ಕಾಯ್ದುಕೊಳ್ಳುವುದು.
   (3) ನಿರಂತರ ಅಭ್ಯಾಸ ಮತ್ತು ಅನ್ವಯದಿಂದ ನಮ್ಮ ಅಭ್ಯಾಸವನ್ನು ತಿದ್ದಿಕೊಳ್ಳುವುದು.
   (4) ಬದುಕನ್ನು ಹಸನಾಗಿಸುವ ಅಭ್ಯಾಸಗಳನ್ನು ಎಳೆವೆಯಿಂದಲೆ ನಿರಂತರ ಅಭ್ಯಾಸದಿಂದ ಗಟ್ಟಿಗೊಳಿಸುವುದು
6. "ಕೆಲವೆ ದಿನಗಳಲ್ಲಿ ನಡೆದಾಡುವ ಮೂಟೆಗಳು ನಾವಾಗುತ್ತೇವೆ" ಈ ಮಾತಿನಲ್ಲಿ ವ್ಯಕ್ತವಾಗಿರುವ ಅರ್ಥ.
   (1) ಹಲವಾರು ಅಭ್ಯಾಸಗಳನ್ನು ನಿರಂತರವಾಗಿ ಸಂಗ್ರಹಿಸುವುದು
   (2) ಚಿಕ್ಕಂದಿನಿಂದಲೆ ಉತ್ತಮ ಹವ್ಯಾಸಗಳನ್ನು ನಿರಂತರ ಪಾಲಿಸುತ್ತಿದ್ದರೆ ಅವು ಗಟ್ಟಿಯಾಗುತ್ತವೆ
   (3) ಉತ್ತಮ ಅಭ್ಯಾಸಗಳು ನಮ್ಮ ಶ್ರೀಮಂತಿಕೆಯನ್ನು ಉನ್ನತಿಗೊಳಿಸುತ್ತವೆ
   (4) ನಮ್ಮ ಅಭ್ಯಾಸಗಳು ಚದುರಿ ಹೋಗದಂತೆ ಭದ್ರವಾಗಿ ಜೋಪಾನ ಮಾಡುವುದು
7. <u>'ಒಳ್ಳೆಯತನ'</u> ವಿಶ್ವಾಸ ಮತ್ತು ಸಂಕಲ್ಪಗಳೇ ನಮಗೆ ದೋಷಮುಕ್ತರನ್ನಾಗಿಸುವ ಶಕ್ತಿಯನ್ನು ನೀಡುವುದಿಲ್ಲ. ಗೆರೆ ಎಳೆದಿರುವ ಪದದ ವ್ಯಾಕರಣ.
   (1) ತದ್ಧಿತಾಂತ ನಾಮ (2) ಕೃದಾಂತ ಭಾವನಾಮ
   (3) ತದ್ಧಿತಾಂತ ಭಾವ ನಾಮ (4) ತದ್ಧಿತಾಂತಾವ್ಯಯ
8. 'ಜೀವನ ಸಂಗ್ರಾಮ' ಇಲ್ಲಿರುವ ಅಲಂಕಾರ
   (1) ದೃಷ್ಟಾಂತಾಲಂಕಾರ (2) ರೂಪಕಾಲಂಕಾರ
   (3) ಶ್ಲೇಷಾಲಂಕಾರ (4) ಉತ್ಪ್ರೇಕ್ಷ ಅಲಂಕಾರ

ಸೂಚನೆ : ಕೆಳಗಿನ ಪದ್ಯವನ್ನು ಓದಿ ಕೊಟ್ಟಿರುವ 9 ರಿಂದ 15 ನೇ ಪ್ರಶ್ನೆಗಳಿಗೆ ಉತ್ತರಿಸಿ.

ತಣ್ಣಗೆ ಉರಿವ
ಸಣ್ಣ ಹಣತೆಯ ಕಣ್ಣ ಬೆಳಕಿನಲ್ಲಿ
ಜಗತ್ತಿನ ತೇಜಸ್ಸೆಲ್ಲವೂ ತುಂಬಿಕೊಂಡಿದೆ
ಒಂದೇ ಒಂದು ಹಣತೆಯ ಕಣ್ಣಿನಲ್ಲಿ.

ಭತ್ತದ ಗದ್ದೆಯ ವಿಸ್ತಾರದ ತೆನೆಯೊಂದರಲ್ಲಿ
ಈ ನೆಲದ ಫಲವಂತಿಕೆಯೆಲ್ಲವೂ ಮನೆಮಾಡಿಕೊಂಡಿದೆ,
ಒಂದೇ ಒಂದು ತೆನೆಯ ತೆಕ್ಕೆಯಲ್ಲಿ.

ಮುಂಜಾವದಲ್ಲಿ
ಹಸುರ ಮೇಲೆ ಮಿರು ಮಿರುಗುವಿಬ್ಬನಿಯ ತೊಟ್ಟಿಲಲ್ಲಿ
ಸಪ್ತಸಾಗರದ ಜಲವೆಲ್ಲವೂ ಮಲಗಿಕೊಂಡಿದೆ,
ಒಂದೇ ಒಂದು ಇಬ್ಬನಿಯ ತೊಟ್ಟಿಲಲ್ಲಿ.

ಹೆಸರಿಲ್ಲದ
ಪುಟ್ಟ ಕವಿಯೊಬ್ಬನ ಕವನದೊಂದು ಪಂಕ್ತಿಯಲ್ಲಿ
ನಿನ್ನೆಯ ಆಸೆಗಳು, ನಾಳೆಯ ಕನಸುಗಳು ಕಾಯುತ್ತಿವೆ,
ಒಂದೇ ಒಂದು ಕವಿತೆಯ ಪಂಕ್ತಿಯಲ್ಲಿ

ಕಣ್ಣೀರಲ್ಲಿ ನೆನೆದ
ಹಸಿದ ಹೊಟ್ಟೆಯೊಳಗುರಿವ ಸಿಟ್ಟಿನಲ್ಲಿ
ನಾಳಿನ ಕ್ರಾಂತಿಯ ಜ್ವಾಲಾಮುಖಿಗಳು ಹೊಗೆಯಾಡುತ್ತಿವೆ,
ಹಸಿದ ಹೊಟ್ಟೆಯೊಳಗುರಿವ ಸಿಟ್ಟಿನಲ್ಲಿ

9. ವಿಶ್ವದ ಕಾಂತಿ ಆವರಿಸಿಕೊಂಡಿರುವುದು
   (1) ಹಸಿರಿನಲ್ಲಿ
   (2) ಬೆಳಕಿನಲ್ಲಿ
   (3) ಕತ್ತಲೆಯಲ್ಲಿ
   (4) ಮಣ್ಣಿನಲ್ಲಿ

10. ಮಣ್ಣಿನ ಸತ್ವ ಇದರಲ್ಲಿ ಹೊರಹೊಮ್ಮಿದೆ
   (1) ರೈತನಲ್ಲಿ
   (2) ಗೊಬ್ಬರದಲ್ಲಿ
   (3) ಉಳುಮೆಯಲ್ಲಿ
   (4) ತೆನೆಯಲ್ಲಿ

11. ಸಾಮಾನ್ಯನ ಕೋಪಕ್ಕೆ ಕಾರಣವೆಂದರೆ
   (1) ತುತ್ತಿನ ಚೀಲ ತುಂಬದಿರುವುದು
   (2) ವಿದ್ಯೆ ಲಭ್ಯವಿಲ್ಲದಿರುವುದು
   (3) ಸಂಪತ್ತು ಬರಿದಾಗುವುದು
   (4) ಪ್ರಕೃತಿಗೆ ಅಸಮತೋಲನದ ಪ್ರಭಾವಗಳು

12. ಕವಿಯು ಭವಿಷ್ಯತ್ತಿಗಾಗಿ ಉಳಿಸಿಕೊಂಡಿರುವುದು

(1) ಆಶೆಗಳನ್ನು (2) ಉಸಿರನ್ನು

(3) ಕನಸುಗಳನ್ನು (4) ಕವನವನ್ನು

13. "ಮಿರು-ಮಿರುಗು" ಇಲ್ಲಿರುವ ವ್ಯಾಕರಣ ವಿಶೇಷ

(1) ದ್ವಿರುಕ್ತಿ (2) ಜೋಡುನುಡಿ

(3) ಪ್ರತಿಧ್ವನಿ (4) ಅನುಕರಣವ್ಯಯ

14. 'ಸಣ್ಣ ಹಣತೆಯ ಕಣ್ಣ ಬೆಳಕಿನಲ್ಲಿ' ಗೆರೆ ಎಳೆದಿರುವ ಪದದಲ್ಲಿನ ವ್ಯಾಕರಣದ ವಿಶೇಷತೆ ಕ್ರಮವಾಗಿ

(1) ವಿಶೇಷಣ ಮತ್ತು ನಾಮಪದ (2) ವಿಶೇಷಣ ಮತ್ತು ವಿಶೇಷಣ

(3) ನಾಮಪದ ಮತ್ತು ವಿಶೇಷಣ (4) ನಾಮ ಪದ ಮತ್ತು ನಾಮ ಪದ

15. ನಸುಕಿನಲ್ಲಿ ಮಂಜಿನ ತೊಟ್ಟಿಲನ್ನು ತುಂಬಿರುವುದು

(1) ಮಗುವಿನ ನಗು (2) ಸಾಗರಗಳ ನೀರು

(3) ಮಳೆಯ ನೀರು (4) ಹಸಿರು ಹುಲ್ಲು

16. ಪ್ರಾಥಮಿಕ ಹಂತದಲ್ಲಿ ಕಂಡು ಬರುವ ಭಾಷಾದೋಷಗಳನ್ನು ಅದೇ ಹಂತದಲ್ಲಿ ಪರಿಹರಿಸಬೇಕಾಗಿರುವ ಅಗತ್ಯ ಏನೆಂದರೆ,

(1) ಈ ಹಂತದಲ್ಲಿ ದೋಷಗಳು ಉಳಿದರೆ ಕ್ರಮೇಣ ಈ ದೋಷಗಳು ವಿಸ್ತಾರಗೊಳ್ಳುತ್ತವೆ.

(2) ಶಾಲಾ ಹಂತದಲ್ಲಿ ಅಧಿಕೃತ ಪರೀಕ್ಷೆ ಇರುವುದಿಲ್ಲ ಹಾಗೂ ಅನುತ್ತೀರ್ಣತೆ ಮಾಡುವಂತಿಲ್ಲ.

(3) ಅದೇ ಹಂತದ ಶಿಕ್ಷಕರ ಸೇವೆ ಲಭ್ಯವಿದ್ದು ಅವರೇ ದೋಷಗಳನ್ನು ತಿದ್ದುವುದು ಸೂಕ್ತ.

(4) ಮುಂದಿನ ಹಂತಗಳಲ್ಲಿ ಭಾಷಾ ಕಲಿಕೆಗೆ ಅವಕಾಶಗಳೇ ಇರುವುದಿಲ್ಲ.

17. ಭಾಷಾ ಕೌಶಲಗಳ ಕಲಿಕೆಯನ್ನು ಈ ರೀತಿ ನಿರ್ದೇಶಿಸಬೇಕು

(1) ಭಾಷೆಯನ್ನು ಕಲಿಸುವಂತಹದಲ್ಲ, ಅದು ಸ್ವಯಂ ಕಲಿಸುವಂತಹ ಕ್ರಿಯೆ.

(2) ಭಾಷಾ ಕೌಶಲಗಳನ್ನು ಸಮನ್ವಯತೆ ಹಾಗೂ ಸುರುಳಿ ಕ್ರಮದಲ್ಲಿ ಬೋಧಿಸುವುದು.

(3) ವ್ಯಾಕರಣ ಸೂತ್ರಗಳ ಆಧಾರದಲ್ಲಿಯೇ ಕಲಿಸುವುದು.

(4) ಭಾಷಾ ಪಠ್ಯ ಪುಸ್ತಕದಲ್ಲಿ ಸಿದ್ಧ ಪಠ್ಯಗಳ ಮೂಲಕ ಕಲಿಯುವುದು.

18. ಓದು-ಬರಹಗಳನ್ನು ಕಲಿಸುವ ಆರಂಭಿಕ ಹಂತಗಳಲ್ಲಿ ಪಾಲಿಸಬೇಕಾದ ಸೂಕ್ತ ನಿಯಮಗಳು

(1) ಸಿದ್ಧತೆ ಹಾಗೂ ಗುರಿ ನಿರ್ಧಾರ (2) ಬಿಡಿಯಿಂದ ಇಡಿ ಕಡೆಗೆ

(3) ನೈದಾನಿಕ ಮತ್ತು ಪುನರಾವರ್ತನೆ (4) ಅನುಕರಣೆ ಮತ್ತು ಅಭ್ಯಾಸ

19. ಬಾಯ್ದೆರೆ ವಾಚನದಲ್ಲಿ ಪಾಲಿಸಬೇಕಾದ ಅತಿಮುಖ್ಯ ಗುಣ.

(1) ಸರಿಯಾಗಿ ನಿಂತು ಗಂಭೀರವಾಗಿ ಓದುವುದು.

(2) ಸ್ಪಷ್ಟ ಉಚ್ಚಾರ ಮತ್ತು ಧ್ವನಿ ಏರಿಳಿತಗಳನ್ನು ಅಳವಡಿಸಿ ಓದುವುದು.

(3) ಪಠ್ಯವನ್ನು ವೇಗವಾಗಿ ಮತ್ತು ನಿರರ್ಗಳವಾಗಿ ಓದುವುದು.

(4) ಪ್ರತಿಯೊಂದು ಪದ ಮತ್ತು ವಾಕ್ಯಗಳನ್ನು ಬಿಡಿಸಿ ಓದುವುದು.

20. ಪಠ್ಯವನ್ನು ಓದಿ ಅರ್ಥೈಸುವ ಸಾಮರ್ಥ್ಯವನ್ನು ಪರೀಕ್ಷಿಸಲು ಬಳಸಬಹುದಾದ ಸಾಧನ

(1) ಪಠ್ಯಾಧಾರಿತ ಪ್ರಶ್ನೆಗಳಿಗೆ ಉತ್ತರ ಹೇಳಿಸುವುದು.

(2) ಪಠ್ಯವನ್ನು ಬಾಯ್ದೆರೆಯಾಗಿ ಓದಿಸುವುದು.

(3) ನೈದಾನಿಕ ಪರೀಕ್ಷೆ ನಿರ್ವಹಿಸುವುದು.

(4) ಪಠ್ಯದ ಮರು ಬೋಧನೆ ಕೈಗೊಳ್ಳುವುದು.

21. ಓದುಗಾರಿಕೆಯನ್ನು ಪೋಷಿಸಲು ಸೂಕ್ತವಾದ ಚಟುವಟಿಕೆ

(1) ಓದುವ ಬಗೆಗೆ ಚರ್ಚೆಗಳನ್ನು ಏರ್ಪಡಿಸುವುದು.

(2) ಶಿಕ್ಷಕರ ನಿರ್ದೇಶನದಲ್ಲಿ ಗಟ್ಟಿ ವಾಚನ ಮಾಡಿಸುವುದು.

(3) ಶಾಸ್ತ್ರ ಕಾವ್ಯಗಳನ್ನು ಪಠಣ ಮಾಡಿಸುವುದು.

(4) ಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ನಿರಂತರ ಓದುವುದು.

22. ಬಹುಭಾಷಾ ಮಕ್ಕಳಿರುವ ತರಗತಿಯಲ್ಲಿ ಶಿಕ್ಷಕರು ಹೊಂದಿರಬೇಕಾದ ಆಶಯ

(1) ವಿದ್ಯಾರ್ಥಿಗಳ ನಡುವಿನ ಅಂತರ ಸಂಬಂಧಗಳು ಕುಸಿಯುತ್ತವೆ.

(2) ವೈಯಕ್ತಿಕ ವಿಭಿನ್ನತೆಗಳನ್ನು ಗುರುತಿಸಿ ಪೋಷಿಸಲು ಸಾಧ್ಯವಿಲ್ಲ.

(3) ವಿದ್ಯಾರ್ಥಿಗಳ ನಡುವಿನ ಸಂವಹನ ಕ್ರಿಯೆ ಕ್ಷೀಣಿಸುತ್ತದೆ.

(4) ವಿದ್ಯಾರ್ಥಿಗಳ ನಡುವೆ ಭಾಷಾ ಸಾಮರಸ್ಯ ಬೆಳೆಯಲು ನೆರವಾಗುತ್ತದೆ.

23. ಪದ್ಯ ಬೋಧನೆಯಲ್ಲಿ ರಸಸ್ವಾದನೆ ಉದ್ದೇಶಗಳ ಸಾಧನೆಗೆ ಪೂರಕವಲ್ಲದ ಚಟುವಟಿಕೆ

(1) ಪದ್ಯವನ್ನು ಬಿಡಿ ಬಿಡಿಯಾಗಿ ವಿಶ್ಲೇಷಿಸುವುದು.

(2) ಪದ್ಯವನ್ನು ಭಾವ ಪೂರ್ಣವಾಗಿ ಗಾಯನ ಮಾಡುವುದು.

(3) ಪದ್ಯದ ಒಳಮೈ ಮತ್ತು ಹೊರಮೈ ಲಕ್ಷಣಗಳನ್ನು ಸವಿಯುವುದು.

(4) ಕವಿಯ ಭಾವನೆ ಮತ್ತು ಸಂದೇಶವನ್ನು ಅರಿಯುವುದು.

24. ಇದು ಪರಿಹಾರ ಬೋಧನೆಯ ಆಶಯಕ್ಕೆ ವಿರುದ್ಧವಾದ ಅಂಶ

(1) ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು.

(2) ಕಲಿಕಾ ಕಂದಕಗಳನ್ನು ನಿವಾರಿಸಿ ಕಲಿಕೆಯಲ್ಲಿ ಸಮವೇಗ ತರುವುದು.

(3) ಮಕ್ಕಳಿಗೆ ಕಲಿಕೆಯಲ್ಲಿ ಸಮತೆಯನ್ನು ಕಲ್ಪಿಸಿಕೊಡುವುದು.

(4) ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಅದೇ ತರಗತಿಯಲ್ಲಿ ಉಳಿಸುವುದು.

25. ಭಾವಪೂರ್ಣ ಮಾತುಗಾರಿಕೆ ಸಾಮರ್ಥ್ಯ ಬೆಳೆಸಲು ಸೂಕ್ತವಾದ ಚಟುವಟಿಕೆ

(1) ಪ್ರಶ್ನೆಗಳಿಗೆ ಉತ್ತರಿಸುವುದು
(2) ಕಥೆ ನಿರೂಪಣೆ
(3) ಶಾಲಾ ವರದಿ ವಾಚನ
(4) ದಿನ ಪತ್ರಿಕೆ ವಾಚನ

26. ವಿದ್ಯಾರ್ಥಿಗಳ ಲಿಖಿತ ಅಭಿವ್ಯಕ್ತಿ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲು ಇದು ಸೂಕ್ತ ಸಾಧನ

(1) ವಸ್ತು ನಿಷ್ಠ ಪ್ರಶ್ನೆಗಳು
(2) ಪ್ರಬಂಧ ಮಾದರಿ ಪ್ರಶ್ನೆಗಳು
(3) ಪದ್ಯವನ್ನು ಕಂಠ ಪಾಠ ಮಾಡುವುದು
(4) ಕಾಪಿ ಪುಸ್ತಕ ಅಭ್ಯಾಸ

27. ಕಿರು ಪರೀಕ್ಷೆಗಳು ಹಾಗೂ ವಾರ್ಷಿಕ ಪರೀಕ್ಷೆಗಳಲ್ಲಿ ಅತ್ಯಂತ ಕಡಿಮೆ ಸಾಧನೆ ತೋರುವ ವಿದ್ಯಾರ್ಥಿಗಳಿಗೆ ಅಳವಡಿಸಬೇಕಾದ ಕ್ರಮ

(1) ನೈದಾನಿಕ ಪರೀಕ್ಷೆ
(2) ವಿಮರ್ಶಾತ್ಮಕ ಬೋಧನೆ
(3) ಪರಿಹಾರ ಬೋಧನೆ
(4) ವೇಗವರ್ಧನೆ ಬೋಧನೆ

28. ಒಂದು ಉತ್ತಮ ಭಾಷಾ ಪಠ್ಯ ಪುಸ್ತಕದ ಸೂಕ್ತವಲ್ಲದ ಅಂಶ

(1) ಪದ ಸಂಪತ್ತು ಮತ್ತು ವಾಕ್ಯರಚನಾ ಚಟುವಟಿಕೆಗಳು
(2) ಓದು, ಬರಹಗಳ ಕಲಿಕೆ ಮತ್ತು ಪೋಷಣೆಯ ಚಟುವಟಿಕೆಗಳು
(3) ಸ್ವತಂತ್ರ ಅಭಿವ್ಯಕ್ತಿ ಮತ್ತು ರಸ ಸ್ವಾದನೆಯನ್ನು ಉತ್ತೇಜಿಸುವ ಅಂಶಗಳು
(4) ಪಡಿಯಚ್ಚು ರೀತಿಯ ಮಾಹಿತಿ ಆಧಾರಿತ ಪಠ್ಯಗಳು

29. ಆರಂಭದಲ್ಲಿ ಓದು ಕಲಿಸಲು ಬಳಸಬಹುದಾದ ಸೂಕ್ತ ಸಾಧನ

(1) ವರ್ಣಮಾಲೆಗಳ ಚಾರ್ಟು
(2) ಚಿತ್ರ ಸಹಿತ ವಾಕ್ಯಗಳ ಸಾಧನ
(3) ಭಾಷಾ ಪ್ರಯೋಗಾಲಯ
(4) ಭಾಷಾ ಸಂಪನ್ಮೂಲ ಪುಸ್ತಕ

30. ವಿದ್ಯಾರ್ಥಿಗಳ ಮೌಖಿಕ ಅಭಿವ್ಯಕ್ತಿ ಸಾಮರ್ಥ್ಯವನ್ನು ಮಾಪನ ಮಾಡಲು ಬಳಸುವ ಸಾಧನ

(1) ಪಠ್ಯ ಆಧಾರಿತ ಪ್ರಶ್ನೆಗಳನ್ನು ಕೇಳುವುದು
(2) ಪ್ರಬಂಧ ಮಾದರಿ ಪ್ರಶ್ನೆಗಳಿಗೆ ಉತ್ತರ ಬರೆಯುವುದು
(3) ವಸ್ತುನಿಷ್ಠ ಪ್ರಶ್ನೆಗಳಿಗೆ ಉತ್ತರಿಸುವುದು
(4) ಭಾಷಾ ಪಠ್ಯಗಳ ಬಗೆಗೆ ಉಕ್ತಲೇಖನ ನೀಡುವುದು

## LANGUAGE – I : ENGLISH

**Directions (Questions 1 – 8) :** Read the given passage and answer the questions that follow by selecting the most appropriate option :

### CABLE TV AND CHILDREN

Cable TV has come to stay. It has made a great 'corner' in the most urban homes today. For some it is a symbol of social status, for others, a necessity for keeping with times. Parents have realized that the cable is to be reckoned with. For although the novelty is slowly wearing off, the attraction still remains. So it is no longer a craze, it is phenomenon.

The impact of Cable TV on children is too strong to be ignored. The consequences of the cable phenomenon are slowly beginning to be felt now. Films, Star Plus serials, Wimbledon on Prime Sports and the latest hot numbers on Music TV (MTV) are the current topics of discussion among children who are getting more and more 'Star' struck.

Though Cable TV brings a new world of Star entertainment and awareness of a new culture to our homes, yet it has exposed the young to a culture which is foreign. It is, therefore, not for the kids with impressionable minds and negative discerning powers. An overloading of information, constant and premature exposure to an unknown culture often unchecked, access to adult shows are some of the problems to be reckoned with. Alongwith, a disturbance of academic routine, curtailment of sports, reading and other creative pursuits. The price is thus heavy to be paid for viewing cable TV.

1. Cable TV has become a craze because
   (1) it is a new phenomenon
   (2) it is now a social status symbol
   (3) it is in tune with the times
   (4) all the above

2. According to the passage, Cable TV has affected the students negatively in the sense that it has
   (1) affected their personality.
   (2) exposed them to an alien culture.
   (3) exposed them to a world of sports and games.
   (4) opened a new world of entertainment.

3. The phrase 'pay a heavy price' means
   (1) something unpleasant that you suffer because of a mistake.
   (2) the amount of money you have to pay for something.
   (3) to be extremely valuable or important.
   (4) demand too much money for goods.

4. Children now discuss mostly
   (1) films
   (2) cartoons
   (3) advertisements
   (4) Star Plus serials, films, music TV, etc.

5. The phrasal verb which means 'gradually stop'
   (1) reckon with
   (2) pay for
   (3) wear off
   (4) hot number

6. Children are more affected by cable TV because of
   (1) their curiosity.
   (2) their vulnerable and impressionable minds.
   (3) their being glued to it.
   (4) its audio video qualities.

7. The word 'curtailment' means
   (1) lessening things
   (2) making less
   (3) cutting down
   (4) making short

8. The sentence 'The consequences of the cable phenomenon are slowly beginning to be felt now' can be changed into active voice as
   (1) People are now slowly feeling the consequences of the cable phenomenon.
   (2) People are now slowly being felt the consequences of the cable phenomenon.
   (3) People have been slowly beginning to feel the consequences of the cable phenomenon.
   (4) People are now slowly beginning to feel the consequences of the cable phenomenon.

**Directions (Questions 9 – 15) :** Read the poem given below and answer the questions that follow choosing the best alternative :

**The Tyger**

Tyger ! Tyger ! burning bright
In the forests of the night
What immortal hand or eye
Could frame thy fearful symmetry ?
In what distant, deeps on skies
Burnt the fire of thine eyes ?
On what wings dare he aspire ?
What the hand dare seize the fire ?
When the stars threw down their spears
And water'd heaven with their tears,
Did he smile his work to see ?
Did he who made the lamb make thee ?
Tyger ! Tyger ! burning bright,
In the forests of the night,
What immortal hand or eye,
Dare frame thy fearful symmetry ?

– *William Blake*

9. The tiger is seen
   (1) in the day
   (2) at night
   (3) at dawn
   (4) at dusk

10. 'Thee' in the line 'Did he who made the lamb make thee' stands for
   (1) lamb
   (2) God
   (3) Tyger
   (4) Poet

11. "When the star threw down their spears
   And water'd heaven with their tears"
   Here the poetic device used is
   (1) metaphor
   (2) simile
   (3) personification
   (4) alliteration

12. The poem is about
   (1) the fearful creation of the tiger
   (2) the brightness of the forest
   (3) the burning fire
   (4) the meekness of the lamb

13. The word which means 'living forever' is
   (1) immortal
   (2) symmetry
   (3) aspire
   (4) seize

14. Tyger ! Tyger ! '<u>burning bright</u>' refers to the
   (1) eyes of the tiger
   (2) burning forest
   (3) stars
   (4) fire

15. The set which does not have rhyming words is
   (1) bright, night, site, write
   (2) symmetry, geometry, poetry, try
   (3) skies, eyes, slice, dice
   (4) thee, fee, see, we

16. Choose the answer which is closest in meaning to the original sentence :
A dog is bigger than a mouse, but smaller than an elephant
(1) A dog is smaller than a mouse
(2) A dog is very big
(3) A dog is the biggest
(4) An elephant is bigger than a dog

17. "The brutal attack on the young man left him with a broken jaw."
The antonym of the word 'brutal' is
(1) honest
(2) violent
(3) barbarous
(4) kind

18. "The extremists were fishing in troubled waters during the political uncertainty in the country." The idiom "To fish in troubled waters" means
(1) take great risks.
(2) a fishy job.
(3) to take advantage of someone's troubled times.
(4) to catch fish.

19. The word 'English' is an example for
(1) disyllabic
(2) trisyllabic
(3) monosyllabic
(4) polysyllabic

20. rakesh said to ramesh you have cheated me a number of times.
The correctly punctuated sentence is
(1) Rakesh said to Ramesh 'you have cheated me a number of times'.
(2) Rakesh said to Ramesh, 'you have cheated me a number of times !.'
(3) Rakesh said to Ramesh: "You have cheated me a number of times".
(4) Rakesh said to Ramesh, "You have cheated me a number of times."

21. Four different parts of the sentence are underlined. Which part of the sentence has an error ?
Music therapy <u>use</u> / to <u>improve</u> / <u>the</u> / <u>patients'</u> health.
A B C D
(1) A
(2) B
(3) C
(4) D

22. 'A child reads forward and backward which disturbs comprehension and speed in reading'. This error comes under
(1) vocalization
(2) skipping
(3) scanning
(4) regression

23. Radio news is useful in developing students'
(1) reading skills
(2) listening skills
(3) writing skills
(4) knowledge of grammar

**24.** Which expression would you use in the following situation ?
"You want to know the exact location of the British library"

(1) Excuse me, could you tell me where the British Library is ?
(2) Tell me where the British Library is.
(3) How do you go to the British Library ?
(4) Do you know the British Library ?

**25.** There are six sentence parts marked $S_1$, $S_6$, P, Q, R, S. The position of $S_1$ and $S_6$ are fixed. You are required to choose one of the four alternatives given below the passage.

$S_1$ : In India everyone is equal
P : enjoy as much
Q : in any other democratic
R : before law and people
S : freedom of speech as
$S_6$ : country of the world

(1) PSRQ (2) QRSP
(3) RPSQ (4) SRQP

**26.** 'Dictocomp' can be used for assessing

(1) listening skills (2) reading skills
(3) writing skills (4) speaking skills

**27.** A teacher can obtain information about the strengths and weaknesses of learner using :

(1) Achievement test (2) Proficiency test
(3) Diagnostic test (4) Aptitude test

**28.** When we say someone is a fluent speaker, we mean...

(1) he should be accurate as well as appropriate user of the language.
(2) he hesitates and speaks slowly.
(3) he easily reads and understands texts.
(4) he speaks naturally without too many pauses or gaps.

**29.** "Hearty congratulations" – This expression is an example for

(1) idiom (2) collocation
(3) phrasal verb (4) compound word

**30.** Reading aloud mainly develops students'

(1) Pronunciation skill (2) Scanning skill
(3) Knowledge of spelling (4) Ability to decode symbols

## PART – II
## LANGUAGE – II : KANNADA

**ಸೂಚನೆ :** ಕೆಳಗೆ ಕೊಟ್ಟಿರುವ ಗದ್ಯವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ **(31 ರಿಂದ 38)** ಉತ್ತರಿಸಿ :

ಗುಲಾಮಗಿರಿಯ ಉಸಿರುಕಟ್ಟುವಂಥ ಕೊಳಚೆಯ ವಾತಾವರಣದಲ್ಲಿ ಜನಿಸಿದವನು ಆತ. ಬಿಳಿಯರ ಕುಹಕ, ನಿಂದೆ, ತಿರಸ್ಕಾರ, ಪೀಡೆಗಳನ್ನೇ ಉಂಡು ನಿರಂತರ ನಿರುತ್ಸಾಹದ ಪರಿಸರವನ್ನೇ ಕಂಡವನು. ಯಾವ ಶಿಕ್ಷಣಕ್ಕೂ, ಅಭಿವೃದ್ಧಿಗೂ ಅವಕಾಶವಿಲ್ಲದಿದ್ದರೂ, ಬಿಳಿಯರ ಮಕ್ಕಳು ಓದುವುದನ್ನು ಕಂಡು ಓದು ಕಲಿಯುವ ಹಂಬಲ ಅವನಲ್ಲಿ ಉದಿಸಿತಂತೆ. ಯಾವ ಅಧ್ಯಾಪಕರ ಸಹಾಯವನ್ನೂ ಮೊದಲಿಗೆ ಪಡೆಯದೆ ತನ್ನ ತಾಯಿ ಕೊಟ್ಟ ಅಕ್ಷರಮಾಲೆಯ ಪುಟ್ಟ ಪುಸ್ತಕವನ್ನು ನೋಡುತ್ತ ನೋಡುತ್ತ ಕಲಿಯಲು ಆರಂಭಿಸಿ ಕೆಲವೇ ವಾರಗಳಲ್ಲಿ ಅದನ್ನು ಕರಗತ ಮಾಡಿಕೊಂಡನಂತೆ. ಬಿಳಿಯರ ಮಕ್ಕಳು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುವುದನ್ನು ಕಂಡು ಬಾಲಕ ಬೂಕರನಿಗೆ 'ಕಲಿಯಬೇಕು ಕಲಿಯಲೇಬೇಕು' ಎನ್ನುವ ತೀವ್ರ ಆಶೆ ಅಂಕುರಿಸಿತು. ಈ ತೀವ್ರ ಅಭೀಪ್ಸೆ ಅವನನ್ನು ಎಂಥ ಉನ್ನತ ಮಟ್ಟಕ್ಕೆ ಏರಿಸಿತು ! ಅವನ ಕಲಿಕೆ ಎಷ್ಟು ಸರ್ವತೋಮುಖವಾದದ್ದು ಎಂಬುದು ರೋಮಾಂಚಕಾರಿಯಾದ ಕತೆ. ಬಡತನದ ಬೇಗೆಯಲ್ಲಿ ಬೆಂದು ಕಷ್ಟನಷ್ಟ, ದುಃಖದುಮ್ಮಾನಗಳನ್ನು ಅಪಾರ ತಾಳ್ಮೆಯಿಂದ ಸಹಿಸಿ, ಮೂಳೆ ಮುರಿಯುವಂಥ ದುಡಿಮೆಯ ಬಲದಿಂದ ಮೇಲಕ್ಕೇರಿದ ಮಹಾನುಭಾವನ ಕತೆ ಇದು. ಅಭಿವೃದ್ಧಿಶೀಲ ವ್ಯಕ್ತಿಗಳೂ, ರಾಷ್ಟ್ರಗಳೂ, ಮೇಲೆರಲು ಬೇಕಾದ ಸ್ಫೂರ್ತಿಯನ್ನು ಆತನ ಜೀವನದಿಂದ ಪಡೆಯುವಷ್ಟು ಉನ್ನತ ಮಟ್ಟಕ್ಕೆ ಅವನು ಏರಿದ್ದ. ಸ್ಥಾನಮಾನ ಗೌರವಗಳು ಅವನನ್ನು ಹುಡುಕಿಕೊಂಡು ಬಂದಾಗ ಅಹಂಕಾರದಿಂದ ಸ್ವಲ್ಪವೂ ಮತ್ತನಾಗದೆ, ನಿಸ್ವಾರ್ಥತೆಯ ಪರಾಕಾಷ್ಠೆಯನ್ನೇರಿ ದಲಿತ ಜನಾಂಗವನ್ನು ಮೇಲಕ್ಕೆತ್ತಲು ಹಗಲು ರಾತ್ರಿಯೆನ್ನದೆ ದುಡಿದ ಈ ಧೀರ ಕರ್ಮಯೋಗಿಯ ರೀತಿನೀತಿಗಳು ಜಗತ್ತಿಗೇ ಒಂದು ಮಹಾ ಆದರ್ಶ ನಿದರ್ಶನ. ಸಮಾಜದ ಹಿತಚಿಂತನೆ ಮಾಡಬಲ್ಲ ಯಾವ ವ್ಯಕ್ತಿಗಾದರೂ ಈತನು ಆರ್ಜಿಸಿದ ಸದ್ಗುಣಗಳ ಸೌಂದರ್ಯವನ್ನು ಕಂಡು ರೋಮಾಂಚನವಾಗದಿರದು ! ಶ್ರದ್ಧೆ, ತಾಳ್ಮೆ, ಸ್ವಪ್ರಯತ್ನ, ಆತ್ಮಶಕ್ತಿಯ ಬಲ- ಇವುಗಳಿಂದ ಮನುಷ್ಯನು ಪರಿಸರದ ಪ್ರಬಲ ಪ್ರತಿಗಾಮಿ ಶಕ್ತಿಗಳನ್ನು ಮೀರಿ ನಿಲ್ಲಬಲ್ಲ ಎಂಬುದಕ್ಕೆ ಆತನ ಜೀವನ ಕಾರ್ಯಗಳು ಜ್ವಲಂತ ಜೀವಂತ ನಿದರ್ಶನಗಳು. ಅವನೆಂದಂತೆ- 'ಯಶಸ್ಸಿನ ಹಿರಿಮೆಯನ್ನು ಒಬ್ಬಾತ ಗಳಿಸಿದ ಸ್ಥಾನಮಾನಗಳಿಂದ ಅಳೆಯುವುದಕ್ಕಿಂತಲೂ, ಆ ಹೋರಾಟದಲ್ಲಿ ಆತ ಎದುರಿಸಿ ಪಾರಾದ ವಿಘ್ನ ಪರಂಪರೆಗಳಿಂದ ಅಳೆಯುವುದು ಸೂಕ್ತ.'

'ಯಾರು ಇತರರಿಗಾಗಿ ಹೆಚ್ಚು ದುಡಿಯುವರೋ ಅವರೇ ಅತ್ಯಂತ ಸುಖಿಗಳು. ಇತರರಿಗಾಗಿ ಯಾವ ಸಹಾಯವನ್ನೂ ಮಾಡದವರು ಅತ್ಯಂತ ದುಃಖಿಗಳು.' 'ದುರ್ಬಲನಿಗೆ ಮಾಡಿದ ಸಹಾಯವು ಸಹಾಯ ಮಾಡಿದವನಿಗೆ ಬಲವನ್ನು ನೀಡುವುದು ; ದೌರ್ಭಾಗ್ಯಶಾಲಿಯನ್ನು ಪೀಡಿಸುವುದರಿಂದ ದುರ್ಬಲತೆ ಪ್ರಾಪ್ತವಾಗುವುದು.'

ದೈಹಿಕ ಶ್ರಮವನ್ನು ಲೆಕ್ಕಿಸದೆ, ಸಂಬಳವನ್ನು ಗಮನಿಸದೆ, ತನ್ನ ಜನಾಂಗದವರನ್ನು ಸುಶಿಕ್ಷಿತರನ್ನಾಗಿ ಮಾಡಲು ಅವನು ಹಗಲಿರುಳು ಶ್ರಮಿಸಿದ. ಶಾಲೆಗಳನ್ನು ತೆರೆದು ಕಲಿಸಿದ. ಖಾಸಗಿಯಾಗಿಯೂ ಅನೇಕರಿಗೆ ಪಾಠ ಹೇಳಿದ. ಮುಂದೆ ಟಸ್ಕಗೀ ಎಂಬಲ್ಲಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿದ. ಆತನ ನಿರಂತರ ದುಡಿಮೆ ಮತ್ತು ಸಾಹಸದಿಂದ ಕೆಲವೇ ವರ್ಷಗಳಲ್ಲಿ ಆ ಸಂಸ್ಥೆ ಪ್ರಸಿದ್ಧಿ ಪಡೆಯಿತು. ಜಗತ್ತಿನ ಬೇರೆ ಬೇರೆ ಭಾಗಗಳಿಂದ ಅಲ್ಲಿಗೆ ವಿದ್ಯಾರ್ಥಿಗಳು ಬಂದರು.

**31.** 'ಕಲಿಯಬೇಕು ಕಲಿಯಲೇಬೇಕು' ಎಂಬ ತೀವ್ರತರದ ಆಶೆಯು ಯಾರಲ್ಲಾದರು ಉಂಟುಮಾಡುವ ಪರಿಣಾಮ

(1) ವ್ಯಕ್ತಿಯ ಸ್ವಂತ ಬೆಳವಣಿಗೆಯನ್ನು ಉತ್ತೇಜಿಸುತ್ತದೆ

(2) ಕಲಿಕೆಯ ಬಗ್ಗೆ ಆಸೆ ಮೂಡಿಸಿ ಸ್ವಾರ್ಥಿಯನ್ನಾಗಿಸುತ್ತದೆ

(3) ಜನರಲ್ಲಿ ಹಟದ ಮನೋಭಾವನೆ ಮೂಡಿಸುತ್ತದೆ

(4) ಗುರಿಸಾಧನೆಗೆ ಪ್ರಬಲ ಅಭಿಪ್ರೇರಣೆಯಾಗಿ ನಿಲ್ಲುತ್ತದೆ

32. ದೀನದಲಿತರನ್ನು ಶೋಷಣೆ ಮತ್ತು ಅಸಮಾನತೆಯಿಂದ ಮುಕ್ತಗೊಳಿಸಲು ಬೂಕರನಿಗೆ ಇದ್ದ ಪ್ರೇರಣೆ
   (1) ಅಮೇರಿಕಾ ಸ್ವಾತಂತ್ರ್ಯ ಹೋರಾಟದಿಂದ ಪಡೆದ ಸ್ಫೂರ್ತಿ
   (2) ಅವನ ಅಧ್ಯಾಪಕರು ನೀಡಿದ ಪ್ರೇರಣೆ ಹಾಗೂ ಮಾರ್ಗದರ್ಶನ
   (3) ಆತನು ಹುಟ್ಟಿ ಬೆಳೆದ ಸನ್ನಿವೇಶದಲ್ಲಿ ನಿಂದನೆ ಹಾಗೂ ಶೋಷಣೆಗೆ ಒಳಗಾದ ಸಂದರ್ಭ
   (4) ಅವನು ಇತಿಹಾಸದಲ್ಲಿ ಓದಿದ ಮಹಾನ್ ಹೋರಾಟಗಳಿಂದ

33. ನಿಜವಾದ ಅರ್ಥದಲ್ಲಿ ಅತ್ಯಂತ ಸುಖಿಗಳಾಗಿರುವವರು
   (1) ತಮ್ಮ ಇತಿಮಿತಿಗಳನ್ನು ಮೀರಿ ಬಾಳುವವರು
   (2) ಇತರರ ಉನ್ನತಿಗಾಗಿ ನಿರಂತರ ದುಡಿವವರು
   (3) ಆಸೆಗಳಿಗೆ ಕಡಿವಾಣ ಹಾಕಿ ಜೀವನ ಸಾಗಿಸುವವರು
   (4) ಹೆಚ್ಚು ಸಂಪಾದಿಸಿ, ಸಂಪತ್ತನ್ನು ಸಂಗ್ರಹಿಸುವವರು

34. ಗುಲಾಮಗಿರಿಯ ನೋವುಂಡ ಬೂಕರನು ಅಧಿಕಾರ-ಸ್ಥಾನಮಾನಗಳು ದೊರೆತಾಗ ತೋರಿದ ವರ್ತನೆ
   (1) ತನ್ನ ವಿರೋಧಿಗಳಿಗೆ ಅಧಿಕಾರ ದೊರೆತಾಗ ಪಾಠ ಕಲಿಸಿದ್ದು
   (2) ಅಹಂಕಾರದಿಂದ ತನ್ನವರೊಂದಿಗೆ ವಿರಸವನ್ನು ಹೊಂದಿದನು
   (3) ನಿಸ್ವಾರ್ಥತೆಯಿಂದ ದಲಿತ ಜನಾಂಗದ ಏಳಿಗೆಗೆ ಶ್ರಮಿಸಿದುದು
   (4) ದಲಿತರ ಉದ್ಧಾರದ ಹೆಸರಲ್ಲಿ ವೈಯಕ್ತಿಕ ಲಾಭ ಗಳಿಸಿದುದು

35. ದಲಿತ ಜನಾಂಗವನ್ನು ಸ್ವಾಭಿಮಾನಿ, ಸ್ವಾವಲಂಬಿಗಳನ್ನಾಗಿ ರೂಪಿಸಲು ಬೂಕರ್.ಟಿ ಮಾಡಿದ ಪ್ರಮುಖ ಕಾರ್ಯ
   (1) ದಲಿತರಿಗಾಗಿ ಶಾಲೆಗಳನ್ನು ತೆರೆದು ಉತ್ತಮ ಶಿಕ್ಷಣ ನೀಡಿದುದು
   (2) ಮೇಲ್ವರ್ಗದವರಿಂದ ದೂರವಿರಿಸಿ ದಲಿತರ ಸಂಘಟನೆ ಮಾಡಿಸಿದ್ದು
   (3) ದಲಿತರಿಗೆ ಆಧ್ಯಾತ್ಮ ತಿಳುವಳಿಕೆ ಹಾಗೂ ರಾಜಕೀಯವನ್ನು ತಿಳಿಸಿದ್ದು
   (4) ದಲಿತರಿಗೆ ಸರ್ಕಾರಿ ಉದ್ಯೋಗಗಳನ್ನು ಕಲ್ಪಿಸಲು ಶ್ರಮಿಸಿದ್ದು

36. "ದುಃಖ ದುಮ್ಮಾನ" ಎಂಬ ಪದವು ಈ ವ್ಯಾಕರಣಾಂಶಕ್ಕೆ ಸೇರುತ್ತದೆ.
   (1) ನುಡಿಗಟ್ಟು
   (2) ಅನುಕರಣಾವ್ಯಯ
   (3) ದ್ವಿರುಕ್ತಿ
   (4) ಜೋಡಿಪದ

37. 'ದುಡಿ' ಪದದ ನಾನಾರ್ಥಗಳ ಸರಿಯಾದ ಜೋಡಿ
   (1) ಸಂಪಾದಿಸು, ಗಳಿಸು
   (2) ಉಳಿಸು, ಶ್ರಮಿಸು
   (3) ಒಂದು ವಾದ್ಯ, ಶ್ರಮಿಸು
   (4) ಶ್ರಮಿಸು, ಒಂದು ಕಲೆ

38. ಯಶಸ್ವಿ ಹೋರಾಟವನ್ನು ವಿಮರ್ಶಿಸುವ ಸರಿಯಾದ ಕ್ರಮ
   (1) ವ್ಯಕ್ತಿಗಳಿಸಿದ ಸ್ಥಾನಮಾನಗಳಿಂದ
   (2) ವ್ಯಕ್ತಿ ಸಂಪಾದಿಸಿದ ಆಸ್ತಿ ಹಾಗೂ ಸಂಪತ್ತಿನಿಂದ
   (3) ವ್ಯಕ್ತಿ ಎದುರಿಸಿ ಗೆದ್ದ ತೊಂದರೆಗಳ ಸರಮಾಲೆಗಳಿಂದ
   (4) ವ್ಯಕ್ತಿಗಳಿಸಿದ ಜನರ ಪ್ರೀತಿ-ಆದರಗಳಿಂದ

ಸೂಚನೆ : ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ನೀಡಿರುವ ಪ್ರಶ್ನೆಗಳ ಸಂಖ್ಯೆ (39 ರಿಂದ 45) ರವರೆಗೆ ಉತ್ತರಿಸಿ :

ಮಾನವ ಸಂಸ್ಕೃತಿಯ ಇತಿಹಾಸದಲ್ಲಿ ಹೆಣ್ಣಿಗೆ ಒಂದು ವಿಶಿಷ್ಟ ಸ್ಥಾನವಿದೆ. ಮಾನವ ಶಾಸ್ತ್ರಜ್ಞರು ಕಂಡುಕೊಂಡಂತೆ ಆದಿಮ ಸಮಾಜದ ಕುಟುಂಬದ ಪರಿಕಲ್ಪನೆ ತಾಯಿ ಮತ್ತು ಮಕ್ಕಳದು. ಮಗುವನ್ನು ಹಡೆದ ತಾಯಿಯೊಂದಿಗೆ ಗುರುತಿಸಲಾಗುತ್ತಿತ್ತೇ ಹೊರತು ಪ್ರೇರಕನಾದ ತಂದೆಯೊಂದಿಗಲ್ಲ. ಮಗುವಿನ ಮೇಲಿನ ಹಕ್ಕು ಹತ್ತು ತಿಂಗಳು ಹೊತ್ತು ಹೆತ್ತು ಹಾಲೂಡಿ ಸಲಹುವ ತಾಯಿಯದಾಗಿತ್ತು. ಹೀಗಾಗಿ ಕುಟುಂಬದಲ್ಲಿನ ತಾಯಿ ಅತ್ಯಂತ ಪ್ರಮುಖ ಹಾಗೂ ಗೌರವದ ಸ್ಥಾನ ಪಡೆದಿದ್ದಳು. ಇಂದಿಗೂ ನಮ್ಮ ಮೂಲವಾಸಿ ಬುಡಕಟ್ಟುಗಳು, ಕೇರಳ ಹಾಗೂ ಕರಾವಳಿ ಕರ್ನಾಟಕದ ಬ್ರಾಹ್ಮಣೇತರ ಸಮುದಾಯಗಳು ಮಾತೃರೂಪಿಯಾಗಿವೆ. ಮಾತೃರೂಪಿ ಸಂಸ್ಕೃತಿ ಎಂದರೆ ಹೆಣ್ಣಿಗೆ ಪ್ರಾಧಾನ್ಯವಿರುವ ಒಂದು ಸಾಮಾಜಿಕ ವ್ಯವಸ್ಥೆ. ಇಲ್ಲಿ ವಂಶ, ಆಸ್ತಿ, ಪರಂಪರೆಯ ಹಕ್ಕುಗಳು ತಾಯಿಯದಾಗಿರುತ್ತದೆ. ತಲೆಮೊರೆಯಾಗಿ ತಾಯಿಯಿಂದ ಮಗಳಿಗೆ ಅನುವಂಶೀಯವಾಗಿ ಇಳಿದು ಬರುತ್ತದೆ.

ಹೆಣ್ಣಿನ ಕೃಷಿ ಸಂಸ್ಕೃತಿಯ ಶೋಧ ಆಕೆಯ ದಬಾವಣೆಗೆ ಕಾರಣವಾದುದು ಇತಿಹಾಸದ ದುರಂತ. ಬೇಟೆ ಸಂಸ್ಕೃತಿಯಲ್ಲಿ ಕುಟುಂಬಕ್ಕೆ ಆಗಂತುಕನಾಗಿದ್ದ ತಂದೆ ಈ ಕಾಲಘಟ್ಟದಲ್ಲಿ ಸರ್ವಾಧಿಕಾರಿಯಾದ. ಖಾಸಗಿ ಆಸ್ತಿಯ ಉಗಮದೊಂದಿಗೆ ಪುರುಷ ಪ್ರಧಾನತೆ ಮತ್ತು ಮಹಿಳಾ ಅಧೀನತೆ ಕಾಲಿಕ್ಕಿತು. ಉತ್ಪಾದನಾ ವ್ಯವಸ್ಥೆ ಗಂಡಿನ ಕೈಗೆ ಬಂದಿತು. ಹೆಣ್ಣು ಶಿಕ್ಷಣ ಹಾಗೂ ಹೊರಪ್ರಪಂಚಕ್ಕೆ ಹೊರತಾದಳು ; ಗೃಹ ಕೇಂದ್ರಿತಕ್ಕೆ ಒಳಪಟ್ಟಳು. ಶಿಕ್ಷಣ ಹಾಗೂ ಆರ್ಥಿಕ ಚೈತನ್ಯ ಕಳೆದುಕೊಂಡ ಹೆಣ್ಣು ದೌರ್ಬಲ್ಯದ ಸಂಕೇತವಾದಳು. ಅಲ್ಲಿಂದಲೇ ಹೆಣ್ಣು ಗಂಡಿನ ದಬಾವಣೆಗೆ ಒಳಗಾದಳು. ಕಂಡು ಅರ್ಥೈಸಿದ ವಸ್ತುವಾದಳು. ಅವನ ನಿರ್ದೇಶನದ ಪಾತ್ರಧಾರಿಯಾದಳು. ಆತ ಬಿತ್ತಿದ ಮೌಲ್ಯಗಳ ಹರಿಕಾರಳಾಗಿ ನಿಯುಕ್ತಳಾದಳು.

ಇವು ನಮ್ಮ ಸಂಸ್ಕೃತಿಯ ಮೇಲು ರಚನೆಯಲ್ಲಿ ಕಾಣುವ ಸತ್ಯಗಳು. ಹೆಣ್ಣಿನ ಈ ಸ್ಥಿತಿ ಒಂದು ಸಾಮಾಜಿಕ ಸಾಂಸ್ಕೃತಿಕ ಉತ್ಪನ್ನ. ಸಂಸ್ಕೃತಿಯ ಒಳರಚನೆಯಲ್ಲಿ ಕಾಣುವ ಹೆಣ್ಣಿನ ಚಿತ್ರ ಬೇರೆಯಾಗಿದ್ದು ಸ್ತ್ರೀ ಚೈತನ್ಯ ನೆಲೆಯದಾಗಿದೆ. ನಮ್ಮ ಸಾಂಸ್ಕೃತಿಕ ಲೋಕದಲ್ಲಿ ಅನೇಕ ಸ್ತ್ರೀ ಶಕ್ತಿ ಮಾದರಿಗಳು ಕಂಡು ಬರುತ್ತವೆ. ಅಂದು ಉನ್ನತ ವಿದ್ಯಾಭ್ಯಾಸಕ್ಕೆ ಹೆಣ್ಣಿಗೆ ಅವಕಾಶವಿತ್ತು. ಶಾಸ್ತ್ರ ಪ್ರವೀಣೆಯರಾದ ಮಹಿಳೆಯರು ಪುರುಷರೊಂದಿಗೆ ವಿದ್ವತ್ ಸಭೆಗಳಲ್ಲಿ, ತಾತ್ವಿಕ ಚರ್ಚೆಗಳಲ್ಲಿ ಭಾಗವಹಿಸಿ ವಿಚಾರ ಮಂಡನೆ ಮಾಡುತ್ತಿದ್ದರು. ಸಾಮಾನ್ಯ ಮಹಿಳೆ ಕೂಡಾ ಸಾಮಾಜಿಕ, ಧಾರ್ಮಿಕ ಸ್ಥಾನಮಾನ ಹೊಂದಿದ್ದು ಮನೆಯ ಒಳಗೆ ಮತ್ತು ಹೊರಗೆ ವಿಶೇಷ ಗೌರವ, ಮನ್ನಣೆಗೆ ಪಾತ್ರಳಾಗಿದ್ದಳು. 'ಮಾತೃದೇವೋಭವ' ಕುಟುಂಬದಲ್ಲಿ ತಾಯಿಗೆ ಪ್ರಥಮ ಪ್ರಾಧಾನ್ಯ, ನಮನ. ಆಮೇಲೆಯೇ ತಂದೆಗೆ ಗೌರವ 'ಪಿತೃದೇವೋಭವ' ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಆಸ್ತಿ, ವಂಶಗಳ ಹಕ್ಕು, ಅಧಿಕಾರ ತಂದೆಯದಾದರೂ ಪರಂಪರೆ ಹಾಗೂ ಸಂಸ್ಕಾರಗಳಿಗೆ ತಾಯಿಯೇ ಗುರು. ತಾಯಿ ಮತ್ತು ಮಗುವಿನ ಬಾಂಧವ್ಯ ಅತ್ಯಂತ ಪವಿತ್ರವಾದುದು ಮತ್ತು ಆಪ್ತವಾದುದು. ಮಗುವೊಂದು ಜನ್ಮ ತಳೆಯುವ ಮುನ್ನದ ಭ್ರೂಣದ ಸ್ಥಿತಿಯಿಂದಲೇ ತಾಯಿಯ ಆಸರೆಯಲ್ಲಿ ಬೆಳೆಯುತ್ತದೆ. ಮುಂದೆ ಕೂಡಾ ಅದು ತನ್ನ ವ್ಯಕ್ತಿತ್ವವನ್ನು ಬಹುಮಟ್ಟಿಗೆ ತಾಯಿಯಿಂದ ಪಡೆದು ಬೆಳೆಯುತ್ತದೆ. ಯಾಕೆಂದರೆ ಮಗು ತನ್ನ ಬಾಲ್ಯಾವಸ್ಥೆಯನ್ನು ಬಹುತೇಕ ತಾಯಿಯ ಜೊತೆಯಲ್ಲಿ ಕಳೆಯುತ್ತದೆ. ಮಗುವು ತಾಯಿಯಿಂದ ಪಡೆಯುವ ವ್ಯಕ್ತಿತ್ವದ ಸ್ವರೂಪವನ್ನು 'ನೂಲಿನಂತೆ ಸೀರೆ, ತಾಯಿಯಂತೆ ಮಕ್ಕಳು' ಎನ್ನುವ ಗಾದೆ ವಿವರಿಸುತ್ತದೆ.

39. ಪ್ರಾಚೀನ ಕಾಲದ ಸ್ತ್ರೀಯರಿಗೆ ಇದ್ದ ಪ್ರಮುಖ ಅವಕಾಶ

(1) ಪುರುಷರ ಮಾರ್ಗದರ್ಶನದಲ್ಲಿ ದುಡಿಯುವ ಅವಕಾಶ

(2) ಪುರುಷ ಬಿತ್ತಿದ ಮೌಲ್ಯಗಳ ಹರಿಕಾರಳಾಗುವ ಅವಕಾಶ

(3) ಪುರುಷ ಅರ್ಥೈಸಿದ ರೀತಿಯಲ್ಲಿ ಬೆಳೆಯುವ ಅವಕಾಶ

(4) ಪುರುಷರಂತೆ ಸ್ತ್ರೀಯರಿಗೂ ಉನ್ನತ ವಿದ್ಯಾಭ್ಯಾಸಕ್ಕೆ ಅವಕಾಶ

40. ಸಮಾಜದಲ್ಲಿ ಹೆಣ್ಣು ಶೋಷಣೆಗೆ ಒಳಗಾಗಲು ಕಾರಣ

(1) ಸಹಜವಾಗಿ ಹೆಣ್ಣು ಗಂಡಿಗಿಂತ ಶಾರೀರಿಕವಾಗಿ ಮೃದುಸ್ವಭಾವದವಳು

(2) ಹೆಣ್ಣು ಮಕ್ಕಳ ಲಾಲನೆ-ಪಾಲನೆಯಲ್ಲಿ ತೊಡಗಬೇಕಾಗಿದ್ದರಿಂದ

(3) ಕೃಷಿ ಸಂಸ್ಕೃತಿಯ ಬೆಳವಣಿಗೆಯಾಗಿ ಪುರುಷ ಪ್ರಧಾನತೆ ಉಂಟಾಗಿದ್ದರಿಂದ

(4) ಕೃಷಿ ಸಂಸ್ಕೃತಿಯ ಪರಿಸ್ಥಿತಿಯಲ್ಲಿ ಶಿಕ್ಷಣ ಹಾಗೂ ಆರ್ಥಿಕ ಸೌಲಭ್ಯಗಳಿಂದ ವಂಚಿತಳಾದುದು

41. ಮಾತೃ ಪ್ರಧಾನ ಸಮಾಜದ ಪ್ರಮುಖ ಲಕ್ಷಣ

(1) ತಾಯಿಯ ಮಾತನ್ನು ತಂದೆಯು ಕೇಳುವ ಸಾಮಾಜಿಕ ವ್ಯವಸ್ಥೆ

(2) ತಾಯಿಯ ಮೂಲಕ ಗಂಡುಮಕ್ಕಳಿಗೆ ಆಸ್ತಿ ವರ್ಗಾವಣೆಗೊಳ್ಳುವ ವ್ಯವಸ್ಥೆ

(3) ತಾಯಿಗೆ ವಂಶ, ಆಸ್ಥಿ ಹಾಗೂ ಪರಂಪರೆಯ ಹಕ್ಕುಗಳು ಸೇರಿರುವ ವ್ಯವಸ್ಥೆ

(4) ತಾಯಿಯು ದೈವ ಸ್ವರೂಪಿಣಿಯಾಗಿರುವ ಸಾಮಾಜಿಕ ವ್ಯವಸ್ಥೆ

42. ಸಮಾಜದಲ್ಲಿ ಪುರುಷ ಪ್ರಧಾನತೆಗೆ ಕಾರಣವಾದ ಪ್ರಮುಖ ಅಂಶ

(1) ಪುರುಷರು ಮಹಿಳೆಯರಿಗಿಂತ ಬುದ್ಧಿವಂತರಾಗಿ ಬೆಳೆದುದು

(2) ಸಮಾಜದಲ್ಲಿ ಖಾಸಗಿ ಆಸ್ಥಿ ಗಳಿಕೆಗೆ ಅವಕಾಶವಾದುದು

(3) ಪುರುಷರು ಬೇಟೆಯಾಡುವ ಸಾಮರ್ಥ್ಯಗಳನ್ನು ಹೊಂದಿದ್ದು

(4) ಕೃಷಿ ವಿಕಾಸ ಹಾಗೂ ಸ್ತ್ರೀಯರ ಶೋಷಣೆ

43. 'ಸರ್ವಾಧಿಕಾರಿ' ಪದವು ಈ ಸಂಧಿಗೆ ಉದಾಹರಣೆ

(1) ಗುಣಸಂಧಿ (2) ಆಗಮಸಂಧಿ (3) ಆದೇಶಸಂಧಿ (4) ಸವರ್ಣದೀರ್ಘಸಂಧಿ

44. 'ದಬಾವಣೆ' ಪದದ ಅರ್ಥ

(1) ನೋಯಿಸು (2) ನಿಂದಿಸು (3) ಗದರಿಸು (4) ಪುಸಲಾಯಿಸು

45. ಸಾಮಾಜಿಕ ಪರಂಪರೆಯಲ್ಲಿ ಹೆಣ್ಣು ತನ್ನ ಅಸ್ತಿತ್ವ ಕಳೆದುಕೊಂಡು ದೌರ್ಬಲ್ಯದ ಸಂಕೇತವಾದುದು ಈ ಕಾರಣದಿಂದ

(1) ಪುರುಷರ ಪರವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳಿಂದ

(2) ಶಕ್ತಿ ಸಾಮರ್ಥ್ಯಗಳಲ್ಲಿ ಪುರುಷರ ಸಮಾನವಾಗಿ ನಿಲ್ಲಲಾಗದ ಸ್ಥಿತಿಯಿಂದ

(3) ಮಹಿಳೆಗೆ ಶ್ರಮಪಡುವ ಅವಕಾಶಗಳು ತಪ್ಪಿದ್ದರಿಂದ

(4) ಮಹಿಳೆ ಮಾನಸಿಕವಾಗಿ ಮತ್ತು ಶಾರೀರಿಕವಾಗಿ ದುರ್ಬಲಳಾಗಿದ್ದುದರಿಂದ

46. "ಮಕ್ಕಳ ಭಾಷಾ ಬಳಕೆಯ ಸಂದರ್ಭಗಳಲ್ಲಿ ಕಂಡು ಬರುವ ಸರಿ-ತಪ್ಪುಗಳನ್ನು ಗುರ್ತಿಸಿ ಅಗತ್ಯ ಮಾರ್ಗದರ್ಶನದೊಂದಿಗೆ ಕಲಿಸಬೇಕು." ಈ ಮಾತಿನಲ್ಲಿ ಅಡಗಿರುವ ಮನೋವೈಜ್ಞಾನಿಕ ನಿಯಮ

(1) ಪುನರ್ಬಲನ ನಿಯಮ (2) ಸಿದ್ಧತಾ ನಿಯಮ

(3) ಅಭ್ಯಾಸ ನಿಯಮ (4) ಗುರಿನಿರೂಪಣಾ ನಿಯಮ

47. ಮಾತನಾಡುವ ಭಾಷೆಯ ಪ್ರಮುಖ ಲಕ್ಷಣ

(1) ಶಿಷ್ಟ ಭಾಷೆಯಲ್ಲಿ ಅಭಿವ್ಯಕ್ತಿಸುವುದು

(2) ಸಹಜ ಹಾಗೂ ಸಾರಸಂಗ್ರಹ ರೀತಿಯ ಅಭಿವ್ಯಕ್ತಿ

(3) ಲೇಖನ ಚಿಹ್ನೆ ಹಾಗೂ ಕಾಗುಣಿತಬದ್ಧ ಅಭಿವ್ಯಕ್ತಿ

(4) ಎಲ್ಲ ವರ್ಗದ ಜನರ ಏಕರೀತಿಯ ಅಭಿವ್ಯಕ್ತಿ

48. ಭಾಷೆಯ ಲಕ್ಷಣಗಳಲ್ಲಿ ಸೇರದ ಅಂಶ

(1) ದ್ವಿವಿಧತೆ (2) ಉತ್ಪಾದಕತೆ

(3) ಅನುವಂಶೀಯತೆ (4) ಸ್ವೀಕೃತಿ ಗುಣ

49. "ಲಿಪಿಗಳು ಕಣ್ಣಿನ ಮೂಲಕ ಮನಸ್ಸನ್ನು ಪ್ರವೇಶಿಸಿ ಅರ್ಥಪೂರ್ಣ ಧ್ವನಿಯಾಗಿ ಹೊರಹೊಮ್ಮುವುದು". ಈ ಕ್ರಿಯೆಯನ್ನು ಸಮರ್ಥಿಸುವ ಕೌಶಲ

(1) ಮಾತುಗಾರಿಕೆ (2) ಸಂಭಾಷಣೆ (3) ಬರವಣಿಗೆ (4) ಓದುಗಾರಿಕೆ

50. ಕನ್ನಡ ಕೈಬರಹ ಕಲಿಸುವ ಮೊದಲ ಹಂತದಲ್ಲಿ ಪಾಲಿಸಬೇಕಾದುದು

(1) ರೇಖಾ ಹಾಗೂ ಅಕ್ಷರ ವಿನ್ಯಾಸದಲ್ಲಿ ಅಭ್ಯಾಸ

(2) ಕಾಗುಣಿತ ವಿನ್ಯಾಸಗಳ ಅಭ್ಯಾಸ

(3) ಅಕ್ಷರಗಳನ್ನು ಸುಂದರವಾಗಿ ವಿನ್ಯಾಸಗೊಳಿಸುವ ಅಭ್ಯಾಸ

(4) ಲೇಖನ ಚಿಹ್ನೆಗಳನ್ನು ವಿನ್ಯಾಸಗೊಳಿಸುವ ಅಭ್ಯಾಸ

51. ಭಾಷಾ ಕಲಿಕೆಯಲ್ಲಿ ದೂರದರ್ಶನವನ್ನು ಬೋಧನಾ ಸಾಧನವಾಗಿ ಬಳಸಿದಾಗ ವಿದ್ಯಾರ್ಥಿಗಳಲ್ಲಿ ಬೆಳೆಯಬಹುದಾದ ಕೌಶಲಗಳು

(1) ಆಲಿಸುವಿಕೆ ಹಾಗೂ ಓದುಗಾರಿಕೆ (2) ಮಾತುಗಾರಿಕೆ ಹಾಗೂ ಬರವಣಿಗೆ

(3) ಓದುಗಾರಿಕೆ ಹಾಗೂ ಬರವಣಿಗೆ (4) ಆಲಿಸುವಿಕೆ ಹಾಗೂ ಮಾತುಗಾರಿಕೆ

52. ಬಹುಭಾಷಾ ತರಗತಿ ನಿರ್ವಹಣೆಯಲ್ಲಿ ಭಾಷಾ ಶಿಕ್ಷಕ ಹೊಂದಿರಬೇಕಾದ ನಿಲುವು

(1) ಒಂದು ನಿರ್ದಿಷ್ಟ ಭಾಷೆಯನ್ನು ಮಾತ್ರ ತರಗತಿಯಲ್ಲಿ ಬಳಸುವುದು

(2) ಬಹು ಭಾಷಾ ಸಂದರ್ಭಗಳನ್ನು ಭಾಷಾ ಕಲಿಕೆಯ ಸಂಪನ್ಮೂಲವಾಗಿ ರೂಪಿಸಿಕೊಳ್ಳುವುದು

(3) ಮಕ್ಕಳು ಮನೆಭಾಷೆಯಲ್ಲಿ ವ್ಯವಹರಿಸಲು ಅವಕಾಶ ನೀಡತಕ್ಕದ್ದಲ್ಲ

(4) ಭಾಷಾ ತರಗತಿಯಲ್ಲಿ ಮಕ್ಕಳು ಕಡ್ಡಾಯವಾಗಿ ಒಂದೇ ಭಾಷೆಯನ್ನು ಬಳಸುವಂತೆ ನೋಡಿಕೊಳ್ಳುವುದು

53. ವಿದ್ಯಾರ್ಥಿಯು ಪದ್ಯವನ್ನು ಓದಿ ಗ್ರಹಿಸುವ ಪ್ರಕ್ರಿಯೆಯಲ್ಲಿ ಸಹಕಾರಿಯಾಗದ ಅಂಶ
(1) ಆಸಕ್ತಿಯಿಂದ ಉದ್ದೇಶಪೂರ್ವಕವಾಗಿ ಓದುವುದು
(2) ಪದ್ಯದ ಪ್ರತಿ ಪದವನ್ನು ಪ್ರತ್ಯೇಕವಾಗಿ ವಿಶ್ಲೇಷಿಸಿ ಓದುವುದು
(3) ಪದ್ಯವನ್ನು ಇಡಿಯಾಗಿ ಓದಿ ಗ್ರಹಿಸುವುದು
(4) ಪದ್ಯದ ಮುಖ್ಯಾಂಶಗಳನ್ನು ಗ್ರಹಿಸುತ್ತಾ ಓದುವುದು

54. ವಿದ್ಯಾರ್ಥಿಗಳ ಸ್ವತಂತ್ರ ಓದು ಹಾಗೂ ಸ್ವಯಂ ಅಧ್ಯಯನಕ್ಕೆ ಪೂರಕವಾಗುವ ಸೌಲಭ್ಯ
(1) ಶಾಲಾ ಪ್ರಯೋಗಾಲಯ (2) ಸಾಹಿತ್ಯ ಸಂಘ
(3) ಶಾಲಾ ಗ್ರಂಥಾಲಯ (4) ಭಾಷಾ ಪ್ರಯೋಗಾಲಯ

55. ನಾಲಿಗೆಯ ಮಧ್ಯಭಾಗವು ಕಠಿಣತಾಲುವನ್ನು ತಾಗಿದಾಗ ಉಂಟಾಗುವ ಧ್ವನಿಗಳನ್ನು ಈ ರೀತಿಯಾಗಿ ಕರೆಯುತ್ತಾರೆ.
(1) ತಾಲವ್ಯ ಧ್ವನಿಗಳು (2) ಮೂರ್ಧನ್ಯ ಧ್ವನಿಗಳು
(3) ಉಭಯೋಷ್ಠ್ಯ ಧ್ವನಿಗಳು (4) ವರ್ತ್ಸ್ಯ ಧ್ವನಿಗಳು

56. 'ಸಾಕ್ರೆಟಿಕ್' ಪದ್ಧತಿಯೆಂದೇ ಹೆಸರಾಗಿರುವ ಬೋಧನಾ ಪದ್ಧತಿ
(1) ಉಪನ್ಯಾಸ ಪದ್ಧತಿ (2) ಕಥನ ಪದ್ಧತಿ
(3) ಚರ್ಚಾ ಪದ್ಧತಿ (4) ಪ್ರಶ್ನೋತ್ತರ ಪದ್ಧತಿ

57. ಕನ್ನಡ ಭಾಷೆಯು ಸ್ಥಾನಾಂತರ ಸ್ವೀಕರಣೆಯ ಮೂಲಕ ರೂಪಿಸಿಕೊಂಡಿರುವ ಪದ
(1) ಜಲಪಾತ (2) ಕೊಳವೆ ಬಾವಿ (3) ತೆರೆದ ಅಂಚೆ (4) ಕ್ಷ-ಕಿರಣ

58. ಭಾಷಾ ತರಗತಿಯ ಎಲ್ಲಾ ಹಂತಗಳಲ್ಲಿ ವಿದ್ಯಾರ್ಥಿ ಹಾಗೂ ಶಿಕ್ಷಕರಿಗೆ ಬಹು ಉಪಯೋಗಿಯಾಗಿ ಬಳಕೆಯಾಗುವ ಉಪಕರಣ
(1) ದೂರದರ್ಶನ (2) ಕಪ್ಪುಹಲಗೆ (3) ಚಾರ್ಟುಗಳು (4) ರೇಡಿಯೋ

59. ಅರ್ಥಗ್ರಹಿಕೆ ಹಾಗೂ ಲಿಖಿತ ಅಭಿವ್ಯಕ್ತಿ ಸಾಮರ್ಥ್ಯವನ್ನು ಮಾಪನ ಮಾಡುವ ಸಾಧನ
(1) ಪದ್ಯಾಧಾರಿತ ರಸಪ್ರಶ್ನೆ ಚಟುವಟಿಕೆ (2) ಪದ್ಯವನ್ನು ಕುರಿತ ಉಕ್ತಲೇಖನ
(3) ಪದ್ಯದ ಸಾರಾಂಶ ಬರೆಯುವ ಪ್ರಶ್ನೆಗಳು (4) ಪದ್ಯದ ಬಗೆಗಿನ ವಸ್ತುನಿಷ್ಠ ಪ್ರಶ್ನಾವಳಿ

60. ಪರಿಹಾರ ಬೋಧನೆಯ ಸೂಕ್ತ ಅರ್ಥ ವಿವರ ಇದಾಗಿದೆ
(1) ಕಲಿಕೆಯನ್ನು ಸ್ಥಿರಗೊಳಿಸಲು ಕೈಗೊಳ್ಳುವ ಪುನರ್ ಬೋಧನೆ
(2) ಕಲಿಕೆಯ ನ್ಯೂನತೆಯ ಆಧಾರದಲ್ಲಿ ಕೈಗೊಳ್ಳುವ ವಿಶಿಷ್ಟ ಬೋಧನೆ
(3) ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರ್ತಿಸಲು ಕೈಗೊಳ್ಳುವ ಬೋಧನೆ
(4) ತರಗತಿಯ ಎಲ್ಲಾ ಮಕ್ಕಳಿಗೂ ಕೈಗೊಳ್ಳುವ ಸ್ಥೂಲ ಸ್ವರೂಪದ ಬೋಧನೆ

## LANGUAGE – II : ENGLISH

**Directions :** Read the given passage and answer the questions **(31 – 38)** that follow by selecting the most appropriate answer :

### TEDDY BEARS

There are different kinds of stuffed animals, possibly the most popular stuffed animal is the toy bear nicknamed the 'teddy bear'. Have you ever wondered how these cute little bears got their name ? It's an interesting story !

In 1902, President Theodore Roosevelt was on a hunting trip in Mississippi. One of the hunters had chased a bear up a tree. He asked the President to shoot it. President Roosevelt, who was known as a sportsman, refused to shoot the bear. He said it was 'unsportsmanlike'. A newspaper made a cartoon about President Roosevelt's refusal.

According to popular legend, a shopkeeper saw the cartoon and asked for the President's permission to make stuffed bears called 'Teddy's bears'. 'Teddy' was a nickname for Theodore and although the President disliked the nickname, many people called him that. Whether the President approved the bears named after him (or if he was ever asked) is not certain. What is certain is that Teddy Bears have been a popular and beloved toy for atleast a hundred years. Teddy bears can be found in almost every toy store. They can also be found in museums, art shows, collector's trade shows, and at many other places. They show no signs of leaving the hearts of children (or collectors !) anytime soon.

**31.** Pick out the word, from the passage, which means 'a set of drawings that tell a funny story'

(1) trip

(2) cartoon

(3) stuff

(4) nickname

**32.** Sportsman, nickname, newspaper are examples of

(1) palindrome

(2) phrases

(3) idioms

(4) compound words

33. A cartoon about President Roosevelt's refusal to shoot was made by

(1) a hunter

(2) people

(3) children

(4) a newspaper

34. Choose the statement which is not 'True' :

(1) People collect Teddy Bears.

(2) Teddy bears can be found in Museum.

(3) Teddy bears have existed for over a century.

(4) Bear was shot dead by the President in 1902.

35. A period of ten years is

(1) decade

(2) centenary

(3) millennium

(4) score

36. The opposite of 'refusal' is

(1) accept

(2) exception

(3) lend

(4) acceptance

37. 'Teddy' was the nickname of the

(1) Shopkeeper

(2) President

(3) Sportsman

(4) Children

38. The meaning of 'legend' in the passage is

(1) A true story.

(2) Traditional story which may or may not be true.

(3) Traditional story which is true.

(4) Traditional story of animals.

**Directions (Question Nos. 39 – 45) :** Read the given poem and answer the questions that follow by selecting the most appropriate option :

**The Millipede**

The little creature
With a hundred feet
Was on its journey
to where
only it knew
My civilized foot
dressed in polished leather
Came down upon it
so gently
There was only a soft sound
Signifying
the end
of a creature of God –
My maker
I looked to see
If my sole was soiled
and walked away.

**39.** The little creature is

(1) bee
(2) centipede
(3) millipede
(4) beetle

**40.** 'My civilized foot' here refers to the

(1) poet
(2) creature
(3) God
(4) polished leather

**41.** The little creature was

(1) at home
(2) in the forest
(3) on a journey
(4) on a hill

**42.** When the little creature came down under the civilized foot it

(1) walked away
(2) was soiled
(3) died
(4) went on a journey

**43.** 'There was only a soft sound'. The opposite of 'soft' is

(1) stiff
(2) cruel
(3) loud
(4) mild

**44.** In the poem 'My maker' refers to the

(1) poet
(2) God
(3) creature
(4) civilized foot

**45.** 'My sole' refers to

(1) millipede's feet
(2) poet's shoes
(3) maker's feet
(4) creature's sole

46. Which part of the sentence has an error in it ?

He has been (A) working (B) here since (C) a (D) long time.

(1) A
(2) B
(3) C
(4) D

47. Which of the following is an example for a homophone pair ?

(1) four, fourth
(2) fly, flee
(3) plain, plane
(4) peace, peak

48. Choose the most appropriate idiom from the options given.

Don't worry about the problems you have in your business. You know there are always _______ in business.

(1) pros and cons
(2) ups and downs
(3) bolt from the blue
(4) cats and dogs

49. Sohan said, "May I use your pen, Mohan ?"

The correct indirect speech is

(1) Sohan asked Mohan that if he might use his pen.
(2) Sohan asked Mohan whether he may use his pen.
(3) Sohan said to Mohan can he use his pen.
(4) Sohan asked Mohan if he might use his pen.

50. The sentences given below are jumbled up. What should be the correct sequence of sentences ?

P : Secondly, I cannot afford the fees.
Q : There are three reasons why I am not admitting my child to that school.
R : Thirdly and most importantly, I do not approve of the type of education the school offers.
S : In the first place, the distance my child will have to commute is too much.

(1) PSQR
(2) QSPR
(3) QRSP
(4) QPSR

51. Name the approach in which the activities and tasks designed are purposeful and meaningful and the emphasis is on the functions of language rather than the rules.

(1) Communicative approach
(2) Structural approach
(3) Suggestopaedia
(4) Audio-lingual approach

52. Which one of the following is not an authentic material ?

(1) Newspaper
(2) Textbook
(3) Magazine
(4) Pamphlet

53. Pick out the expression used for complaining about something.

(1) Why don't you ... ?
(2) I'd rather suggest ...
(3) I'm sorry to bring this to your notice.
(4) Don't worry.

54. Which word has a nasal sound ?

(1) Sing (2) Laugh

(3) Walk (4) Place

55. In 'Inductive method' of teaching grammar, the teacher

(1) moves from presentation to practice.

(2) starts with rules and then provides examples.

(3) moves from examples to rules.

(4) acts as a facilitator.

56. Which of the following is a positive feedback given to the child ?

(1) There are a lot of spelling errors in your writing.

(2) I like the way you have described your home in this paragraph.

(3) You are not showing any interest in writing.

(4) You'd better stop writing.

57. Which of the following is important in acquiring a language ?

(1) Language rich environment

(2) Parental background

(3) Learning the rules by heart

(4) Home assignments and projects

58. When children read silently, they should

(1) move their fingers across the lines.

(2) read the text word by word.

(3) concentrate on spellings of each and every word.

(4) try to guess the meanings of new words from the context.

59. Which of the following is not a proverb ?

(1) Owner's pride, neighbour's envy.

(2) An idle mind is a devil's workshop.

(3) A rolling stone gathers no moss.

(4) Two heads are better than one.

60. Given below are four statements related to young children. One of them is false. Pick out the false statement.

(1) Children focus on the meaning of utterances rather than the form.

(2) They use 'chunks' of language they have picked up from different sources.

(3) They learn by observation and imitation.

(4) They have a long span of attention.

## PART – III
# CHILD DEVELOPMENT AND PEDAGOGY

61. ಮೆದುಳನ್ನು ಕಾರ್ಯ ಪಟುತ್ವಗೊಳಿಸುವ ತಂತ್ರವನ್ನು ಈ ವಿದ್ಯಾರ್ಥಿಗಳಿಗೆ ಉಪಯೋಗಿಸುವರು.
    (1) ಮಂದಗತಿಯಲ್ಲಿ ಕಲಿಯುವವರು (2) ಸೃಜನಶೀಲ ಮಕ್ಕಳು
    (3) ಮಾನಸಿಕ ಸವಾಲುಳ್ಳ ಮಕ್ಕಳು (4) ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳು

62. ಕಲಿಕೆಯಲ್ಲಿ ಹಿಂದುಳಿವಿಕೆಯು ಕೆಳಗಿನ ಒಂದನ್ನು ಬಿಟ್ಟು ಯಾವುದರಿಂದಲಾದರೂ ಉಂಟಾಗಬಹುದು.
    (1) ಶಿಕ್ಷಕರ ಬೋಧನಾ ರೀತಿಯಿಂದ
    (2) ಮಂದಬುದ್ಧಿಯಿಂದ
    (3) ಪ್ರಸವಪೂರ್ವ ಹಂತದಲ್ಲಿ ಮದ್ಯಪಾನ ಮಾಡುವುದರಿಂದ
    (4) ಶೈಶವಾವಸ್ಥೆಯಲ್ಲಿನ ಮಾನಸಿಕ ಕಾಯಿಲೆಯಿಂದ

63. ಸುಮಂತನು ಆಟದ ಸಾಮಾನುಗಳನ್ನು ಒಡೆದು ಅದರಲ್ಲಿರುವ ಭಾಗಗಳನ್ನು ತಿಳಿಯಲು ಬಿಚ್ಚುತ್ತಾನೆ. ನೀವು ಏನು ಮಾಡುವಿರಿ ?
    (1) ಅವನ ಕುತೂಹಲವನ್ನು ಪ್ರೋತ್ಸಾಹಿಸಿ ಅವನ ಶಕ್ತಿಯನ್ನು ಉದಾತ್ತೀಕರಿಸುವಿರಿ
    (2) ಸುಮಂತನನ್ನು ಆಟವಾಡುವುದಕ್ಕೆ ಬಿಡುವುದೇ ಇಲ್ಲ
    (3) ಯಾವಾಗಲೂ ಹತ್ತಿರದಿಂದ ವೀಕ್ಷಿಸುತ್ತೀರಿ
    (4) ಅವನಿಗೆ ಆಟದ ಸಾಮಾನುಗಳನ್ನು ಒಡೆದು ಹಾಕಬಾರದೆಂದು ಅರ್ಥಮಾಡಿಸುವಿರಿ

64. ಕೆಲವು ಕಹಿ ಅನುಭವಗಳ ನಂತರ ಮಗುವೊಂದು ಶಿಕ್ಷಕರನ್ನು ದ್ವೇಷಿಸಲು ಪ್ರಾರಂಭಿಸುತ್ತದೆ. ಇದು ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?
    (1) ಜ್ಞಾನಾತ್ಮಕ ವರ್ತನೆ (2) ಕ್ರಿಯಾಜನ್ಯ ವರ್ತನೆ
    (3) ಭಾವನಾತ್ಮಕ ವರ್ತನೆ (4) ಪ್ರತಿಫಲನಾತ್ಮಕ ವರ್ತನೆ

65. ಈ ಕೆಳಗಿನವುಗಳಲ್ಲಿ ಯಾವುದು ಮಕ್ಕಳ ಮಾನಸಿಕ ಆರೋಗ್ಯವನ್ನು ಕಾಪಾಡುವಲ್ಲಿ ಶಿಕ್ಷಕನಿಗೆ ಸಹಕಾರಿಯಾಗಿದೆ ?
    (1) ಅತಿಯಾದ ಶಿಸ್ತನ್ನು ಜಾರಿಗೊಳಿಸುವುದು (2) ಅನಾರೋಗ್ಯಕರ ಸ್ಪರ್ಧೆಯನ್ನು ತಡೆಗಟ್ಟುವುದು
    (3) ಬೇರೆ ಮಕ್ಕಳೊಂದಿಗೆ ಹೋಲಿಸುವುದು (4) ಸಂಪೂರ್ಣತೆಗೆ ಅತಿಯಾದ ಒತ್ತು ನೀಡುವುದು

66. 'ಪರೀಕ್ಷೆಯಲ್ಲಿ ಅನುತ್ತೀರ್ಣನಾದ ವಿದ್ಯಾರ್ಥಿ, ಶಿಕ್ಷಕರು ಸರಿಯಾಗಿ ಪಾಠ ಮಾಡಿಲ್ಲವೆಂದು ಹೇಳುವುದು' ಈ ಹೊಂದಾಣಿಕೆಯ ತಂತ್ರಕ್ಕೆ ಉದಾಹರಣೆಯಾಗಿದೆ.
    (1) ಪರಿಹಾರ (2) ಉದಾತ್ತೀಕರಣ (3) ಪ್ರಕ್ಷೇಪಣೆ (4) ಪ್ರತಿಗಮನ

67. ಸಮಸ್ಯಾತ್ಮಕ ವರ್ತನೆಯ ವಿದ್ಯಾರ್ಥಿಗಳನ್ನು ಅಧ್ಯಯನ ಮಾಡಲು ಉಪಯೋಗಿಸುವ ವಿಧಾನ
    (1) ವ್ಯಕ್ತಿ ಅಧ್ಯಯನ (2) ಅಂತರಾವಲೋಕನ
    (3) ಪ್ರಾಯೋಗಿಕ (4) ಅವಲೋಕನ

68. ಈ ಹಂತವನ್ನು 'ಬೆಳವಣಿಗೆಯ ಬುಗ್ಗೆ' ಎಂದು ಕರೆಯುವರು

(1) ಪೂರ್ವ ಬಾಲ್ಯಾವಸ್ಥೆ
(2) ಉತ್ತರ ಬಾಲ್ಯಾವಸ್ಥೆ
(3) ತಾರುಣ್ಯಾವಸ್ಥೆ
(4) ಶೈಶವಾವಸ್ಥೆ

69. ಸೃಜನಶೀಲತೆಯ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಹಂತಗಳ ಅನುಕ್ರಮವು

(1) ಸಿದ್ಧತೆ, ಪರಿಪಾಕಾವಸ್ಥೆ, ಜ್ಞಾನೋದಯ, ತಾಳೆ ನೋಡುವಿಕೆ
(2) ತಾಳೆ ನೋಡುವಿಕೆ, ಜ್ಞಾನೋದಯ, ಸಿದ್ಧತೆ, ಪರಿಪಾಕಾವಸ್ಥೆ
(3) ಜ್ಞಾನೋದಯ, ತಾಳೆ ನೋಡುವಿಕೆ, ಸಿದ್ಧತೆ, ಪರಿಪಾಕಾವಸ್ಥೆ
(4) ಪರಿಪಾಕಾವಸ್ಥೆ, ಸಿದ್ಧತೆ, ಜ್ಞಾನೋದಯ, ತಾಳೆ ನೋಡುವಿಕೆ

70. ಮಾನಸಿಕ ವಯಸ್ಸು 15 ಇರುವ ಓರ್ವ ಹುಡುಗಿಯ I.Q. 125 ಇದ್ದರೆ ಅವಳ ದೈಹಿಕ ವಯಸ್ಸು ಎಷ್ಟು ?

(1) 10
(2) 14
(3) 16
(4) 12

71. ಈ ಕೆಳಗಿನವುಗಳಲ್ಲಿ ಯಾವುದು ಸುಖಾನ್ವೇಷಣ ತತ್ವದ ಪ್ರಕಾರ ಕೆಲಸ ನಿರ್ವಹಿಸುತ್ತದೆ ?

(1) ಇದ್
(2) ಅಹಂ
(3) ಅತ್ಯಹಂ
(4) ಜಾಗೃತಪೂರ್ವ ಮನಸ್ಸು

72. ಈ ಕೆಳಗಿನವುಗಳಲ್ಲಿ ಯಾವುದು ಮನೋಜನ್ಯ ಚಲನವಲಯದ ಅತ್ಯಂತ ಉನ್ನತ ಮಟ್ಟದ ಸಾಧನೆ ?

(1) ಸ್ಫುಟತೆ (ಆರ್ಟಿಕ್ಯುಲೇಷನ್)
(2) ಮೌಲ್ಯಮಾಪನ
(3) ಸ್ವಾಭಾವೀಕರಣ
(4) ಅನುಕರಣೆ

73. ಕೆಳಗಿನ ಯಾವ ಒಂದು ಜೊತೆಯ ಅಂಶಗಳನ್ನು ಒಂದೇ ನಾಣ್ಯದ ಎರಡು ಮುಖಗಳು ಎಂದು ಪರಿಗಣಿಸಲಾಗಿದೆ ?

(1) ಆಸಕ್ತಿ ಮತ್ತು ಅವಧಾನ (ಎಚ್ಚರಿಕೆ)
(2) ಆಸಕ್ತಿ ಮತ್ತು ಪರಿಪಕ್ವತೆ
(3) ಪರಿಪಕ್ವತೆ ಮತ್ತು ಪ್ರೇರಣೆ
(4) ಮನೋಭಾವ ಮತ್ತು ಪರಿಪಕ್ವತೆ

74. ಕೆಳಗಿನ ಯಾವುದನ್ನು 'ಸಂಶೋಧಕನ ಕಣ್ಣು' ಎಂದು ಕರೆಯುತ್ತಾರೆ ?

(1) ಸಂಭವನೀಯ ಕಾರಣಗಳ ವಿಶ್ಲೇಷಣೆ
(2) ನಿರ್ದಿಷ್ಟಗೊಳಿಸಿದ ಸಮಸ್ಯೆ
(3) ಕಾರ್ಯ ಯೋಜನೆ
(4) ಕ್ರಿಯಾ ಪ್ರಾಕಲ್ಪನೆ

75. ಈ ಹಂತದ ಜ್ಞಾನಾತ್ಮಕ ಬೆಳವಣಿಗೆಯಲ್ಲಿ ತಾರ್ಕಿಕ ಚಿಂತನೆ ಸಂಪೂರ್ಣವಾಗಿ ವಿಕಾಸಗೊಳ್ಳುತ್ತದೆ.

(1) ಸಂವೇದನಾಗತಿ ಹಂತ
(2) ಮೂರ್ತಕಾರ್ಯಗಳ ಹಂತ
(3) ಔಪಚಾರಿಕ ಕಾರ್ಯಗಳ ಹಂತ
(4) ಕಾರ್ಯಪೂರ್ವ ಹಂತ

76. 'ಮಕ್ಕಳು ಚಲನಚಿತ್ರದಲ್ಲಿ ಪ್ರದರ್ಶಿತವಾಗುವ ಹಿಂಸಾತ್ಮಕ ವರ್ತನೆಯನ್ನು ನೋಡಿ ಕಲಿಯಬಹುದು' ಎಂಬ ತೀರ್ಮಾನವನ್ನು ಯಾವ ಮನೋವಿಜ್ಞಾನಿಯು ಮಾಡಿರುವ ಕೆಲಸದ ಆಧಾರದ ಮೇಲೆ ತೀರ್ಮಾನಿಸಬಹುದು ?

(1) ಎಡ್‌ವರ್ಡ್ ಎಲ್. ಥಾರ್ನ್‌ಡೈಕ್ (2) ಜೆ.ಬಿ. ವ್ಯಾಟ್ಸನ್
(3) ಆಲ್‌ಬರ್ಟ್ ಬಂಡೂರ (4) ಜೀನ್ ಪಿಯಾಜೆ

77. ಲಿಂಗ ತಾರತಮ್ಯದ ಬೆಳವಣಿಗೆಯ ಪ್ರಮುಖ ಮೂಲ

(1) ಸಮುದಾಯ (2) ಸಮೂಹ ಮಾಧ್ಯಮ
(3) ಶಾಲೆ (4) ಕುಟುಂಬ

78. ನ್ಯೂನತೆಯುಳ್ಳ ಮಕ್ಕಳಿಗಾಗಿ ಇರುವ ಕೇಂದ್ರಿಯ ನಿಯೋಜಿತ ಸಮಗ್ರ ಶಿಕ್ಷಣದ ಮೂಲಕ ಶೈಕ್ಷಣಿಕ ಅವಕಾಶಗಳನ್ನು ಇಲ್ಲಿ ನೀಡುವ ಗುರಿ ಹೊಂದಿದೆ.

(1) ಸಾಮಾನ್ಯ ಶಾಲೆಗಳು (2) ವಿಶೇಷ ಶಾಲೆಗಳು
(3) ಮುಕ್ತ ಶಾಲೆಗಳು (4) ಅಂಧ ಪರಿಹಾರ ಸಂಘ ಶಾಲೆಗಳು

79. ನೈತಿಕ ಬೆಳವಣಿಗೆಯ ಸಿದ್ಧಾಂತವನ್ನು ಪ್ರತಿಪಾದಿಸಿದವರು

(1) ಕೋಲ್‌ಬರ್ಗ್ (2) ಬಂಡೂರ
(3) ಬ್ರೂನರ್ (4) ಗ್ಯಾನೆ

80. ಬಹುಮುಖ ಬುದ್ಧಿಶಕ್ತಿಯ ಸಿದ್ಧಾಂತದ ಪ್ರಕಾರ ಎಲ್ಲಾ ರೀತಿಯ ಪ್ರಾಣಿಗಳನ್ನು, ಸಸ್ಯಗಳನ್ನು ಹಾಗೂ ಲವಣಗಳನ್ನು ಗುರುತಿಸುವ ಹಾಗೂ ವರ್ಗೀಕರಿಸುವ ಸಾಮರ್ಥ್ಯವನ್ನು ಹೀಗೆ ಕರೆಯುವರು.

(1) ಅಂತರ್‌ವ್ಯಕ್ತ ಬುದ್ಧಿಶಕ್ತಿ (2) ಶಾಬ್ದಿಕ ಭಾಷಾ ಬುದ್ಧಿಶಕ್ತಿ
(3) ತಾರ್ಕಿಕ ಗಣಿತೀಯ ಬುದ್ಧಿಶಕ್ತಿ (4) ಸಹಜ ಬುದ್ಧಿಶಕ್ತಿ

81. ಡಿಸ್‌ಲೆಕ್ಸಿಯಾವು ಇದಕ್ಕೆ ಸಂಬಂಧಿಸಿದ ಸಮಸ್ಯೆಯಾಗಿದೆ

(1) ಓದುವುದು (2) ಮಾತನಾಡುವುದು
(3) ಮಾತನಾಡುವುದು ಮತ್ತು ಆಲಿಸುವುದು (4) ಕೇಳಿಸಿಕೊಳ್ಳುವುದು

82. ಒಬ್ಬ ವಿದ್ಯಾರ್ಥಿಯು ತನ್ನ ಸಹಪಾಠಿಗಳೊಂದಿಗೆ ಒರಟಾಗಿ ವರ್ತಿಸುವನು ಹಾಗೂ ಶಾಲಾ ನಿಯಮಗಳಿಗೆ ಹೊಂದಿಕೊಳ್ಳುವುದಿಲ್ಲ. ಈ ವಿದ್ಯಾರ್ಥಿಗೆ ನೀಡಬೇಕಾದ ಅವಶ್ಯಕ ಸಹಾಯದ ವಲಯ

(1) ಉನ್ನತ ಮಟ್ಟದ ಕೌಶಲಗಳು (2) ಜ್ಞಾನಾತ್ಮಕ ವಲಯ
(3) ಮನೋಜನ್ಯ ಕ್ರಿಯಾವಲಯ (4) ಭಾವನಾತ್ಮಕ ವಲಯ

83. ನೈಜವಾದ ನೈತಿಕ ಪ್ರಜ್ಞೆಯು ವ್ಯಕ್ತವಾಗುವ ಹಂತವು

(1) ತಾರುಣ್ಯಾವಸ್ಥೆ (2) ವಯಸ್ಕ
(3) ಪೂರ್ವ ಬಾಲ್ಯಾವಸ್ಥೆ (4) ಉತ್ತರ ಬಾಲ್ಯಾವಸ್ಥೆ

84. ಈ ಹೇಳಿಕೆ 'ಗಂಡಸರು ಹೆಂಗಸರಿಗಿಂತ ಹೆಚ್ಚು ಬುದ್ಧಿವಂತರು'

(1) ನಿಜ
(2) ಸುಳ್ಳು
(3) ಲಿಂಗ ತಾರತಮ್ಯವನ್ನು ತೋರಿಸುತ್ತದೆ
(4) ಕೆಲವು ಜನಾಂಗಗಳಲ್ಲಿ ಸತ್ಯ

85. ಒಂದು ಸಮೂಹದ ಸದಸ್ಯರ ಸಂಬಂಧವನ್ನು ಅಧ್ಯಯನ ಮಾಡಲು ಈ ಕೆಳಗಿನವುಗಳಲ್ಲಿ ಯಾವುದನ್ನು ಬಳಸಲಾಗುತ್ತದೆ ?

(1) ಸಮಾಜ ಮಿತಿ ತಂತ್ರ
(2) ಪ್ರಕ್ಷೇಪಣಾ ತಂತ್ರ
(3) ದರ್ಜಾ ಮಾಪನ
(4) ಸಾಂದರ್ಭಿಕ ಪರೀಕ್ಷೆ

86. ಅನಿಮಿಸಮ್ ಲಕ್ಷಣವು. ಈ ಹಂತದ ಜ್ಞಾನಾತ್ಮಕ ಬೆಳವಣಿಗೆಯ ಮುಖ್ಯ ಲಕ್ಷಣ

(1) ಸಂವೇದನಾ ಗತಿ ಹಂತ
(2) ಕಾರ್ಯಪೂರ್ವ ಹಂತ
(3) ಮೂರ್ತ ಕಾರ್ಯಗಳ ಹಂತ
(4) ಔಪಚಾರಿಕ ಕಾರ್ಯಗಳ ಹಂತ

87. ಪುನರ್ಬಲನದ ಉಪಯೋಗದಿಂದ

(1) ಬುದ್ಧಿಶಕ್ತಿ ಉತ್ತಮಗೊಳ್ಳುತ್ತದೆ
(2) ಸಾಮಾಜಿಕ ಸಂಬಂಧಗಳನ್ನು ಬೆಳಸುತ್ತದೆ
(3) ಮಾನಸಿಕ ಆರೋಗ್ಯ ವೃದ್ಧಿಸುತ್ತದೆ
(4) ಪ್ರತಿಕ್ರಿಯೆಯನ್ನು ಬಲಗೊಳಿಸುತ್ತದೆ

88. ವಿಸ್ಮೃತಿಗೆ ಇದು ಒಂದು ಪ್ರಮುಖ ಕಾರಣವಾಗಿದೆ.

(1) ಭಯ ಮತ್ತು ಆತಂಕದಿಂದ ಆಗುವ ಭಾವನಾತ್ಮಕ ತಡೆ
(2) ಧನಾತ್ಮಕ ವರ್ಗಾವಣೆ
(3) ಮನರಂಜನೆಯ ಕೊರತೆ
(4) ಸಹಪಾಠಿಗಳ ನಡುವೆ ಸ್ಪರ್ಧೆ

89. ಒಂದು ಮಗು ನೂರ ಹತ್ತು ಎಂಬ ಸಂಖ್ಯೆಯನ್ನು 10010 ಎಂದು ಬರೆಯುವುದು. ಈ ದೌರ್ಬಲ್ಯವನ್ನು ಹೀಗೆನ್ನುತ್ತಾರೆ.

(1) ಡಿಸ್‌ಕ್ಯಾಲ್ಸಿಯಾ
(2) ಡಿಸ್‌ಗ್ರಾಫಿಯಾ
(3) ಡಿಸ್‌ಕ್ಯಾಲ್ಕುಲಿಯಾ
(4) ಡಿಸ್‌ಕ್ಯಾಲಿಗ್ರಾಫಿಯಾ

90. ಆಶ್ರಿತ ನ್ಯೂನತೆ ಇರುವ ಮಕ್ಕಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುವವರು

(1) ಮನೋವೈದ್ಯರು
(2) ಶಿಕ್ಷಕರು
(3) ಸ್ನೇಹಿತರು
(4) ಪೋಷಕರು

# PART – IV
## SOCIAL SCIENCE

91. ಉತ್ಖನನ ಸಂದರ್ಭದಲ್ಲಿ ದೊರೆಯುವ ಪುರಾತತ್ವ ಪಳೆಯುಳಿಕೆಗಳನ್ನು ಕೆಳಕಂಡ ಈ ವಿಧಾನದಿಂದ ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿ ಅವುಗಳ ಕಾಲ ಮತ್ತು ಪ್ರಾಚೀನತೆಯನ್ನು ನಿರ್ಧರಿಸಲಾಗುತ್ತದೆ.

(1) ಸಿಲಿಕಾನ್ ಮತ್ತು ಪೊಟ್ಯಾಸಿಯಂ (2) ಕ್ಯಾಲ್ಸಿಯಂ ಮತ್ತು ಯುರೇನಿಯಂ

(3) ಕಾರ್ಬನ್ 14 ಮತ್ತು ಪೊಟ್ಯಾಸಿಯಂ (4) ಕಾರ್ಬನ್ 14 ಮತ್ತು ಸಿಲಿಕಾನ್

92. ಶ್ರೀ ದಯಾರಾಂ ಸಹಾನಿಯವರು "ಹರಪ್ಪ" ನಿವೇಶನ ಕಂಡು ಹಿಡಿದ ವರ್ಷ

(1) 1919 (2) 1920 (3) 1921 (4) 1922

93. ಇತಿಹಾಸದ ಪಿತಾಮಹ

(1) ಪಾಲಿಬಿಯಸ್ (2) ಕಾರ್ಲ್ ಮಾರ್ಕ್ಸ್

(3) ಹೆರೋಡಟಸ್ (4) ಅರ್ನಾಲ್ಡ್ ಟಾಯನ್‌ಬಿ

94. ಬುದ್ಧನು ತನ್ನ ಪ್ರಥಮ ಪ್ರವಚನವನ್ನು ಸಾರಾನಾಥದಲ್ಲಿ ನೀಡಿದ ಘಟನೆ

(1) ಧರ್ಮ ಬೋಧನ (2) ಧರ್ಮ ಚಕ್ರ ಪ್ರವರ್ತನ

(3) ಧರ್ಮ ಪ್ರವರ್ತನ (4) ಧರ್ಮ ಸ್ಥಾಪನ

95. ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ ಸರಿಯಾದ ಉತ್ತರವನ್ನು ಆರಿಸಿ.

A. ಅಶೋಕನು ಶಿಲಾಶಾಸನಗಳನ್ನು ಹೊರಡಿಸಿದ ಭಾರತದ ಮೊದಲ ಸಾಮ್ರಾಟ.

B. ಚಂದ್ರಗುಪ್ತ ಮೌರ್ಯನು ಸೆಲ್ಯೂಕಸ್‌ನನ್ನು ಸೋಲಿಸಿ ಅವನ ಮಗಳನ್ನು ವಿವಾಹವಾದನು.

C. ಮಹಾವೀರನು ಪವಿತ್ರ ಕ್ಷೇತ್ರಗಳಾದ ಲುಂಬಿನಿವನ, ಕಪಿಲವಸ್ತು, ಸಾರಾನಾಥ್‌ಗಳಲ್ಲಿ ಧರ್ಮಗೋಷ್ಠಿ ಏರ್ಪಡಿಸಿದನು.

D. ಶ್ರವಣ ಬೆಳಗೊಳ ಜೈನ ಧರ್ಮದ ಪುಣ್ಯ ಕ್ಷೇತ್ರ.

(1) A, B ಮತ್ತು D ಸರಿಯಾಗಿವೆ (2) B, C ಮತ್ತು A ಸರಿಯಾಗಿವೆ

(3) C ಮತ್ತು A ತಪ್ಪು (4) B ಮತ್ತು D ತಪ್ಪು

96. ಈ ಕೆಳಗಿನ ಸ್ಥಳಗಳಲ್ಲಿ "ಗಾಂಧಾರ ಶೈಲಿ" ಯ ಕಲಾ ಶಿಲ್ಪಗಳು ಹೆಚ್ಚಾಗಿ ಕಂಡು ಬರುತ್ತವೆ.

(1) ಶ್ರೀನಗರ, ಕಾನಿಷ್ಕಪುರ, ತಕ್ಷಶಿಲ, ಮಥುರ

(2) ತಂಜಾವೂರು, ಕಾಬುಲ್, ಪೇಶಾವರ್, ಆಗ್ರಾ

(3) ಗಾಂಧಾರ, ಕಾನಿಷ್ಕಪುರ, ತಕ್ಷಶಿಲ, ದೆಹಲಿ

(4) ಮಥುರ, ಕಾನಿಷ್ಕಪುರ, ತಕ್ಷಶಿಲ, ಗಾಂಧಾರ

97. ಪಟ್ಟಿ–A ಯಲ್ಲಿ ಗ್ರಂಥಕರ್ತರು ಮತ್ತು ಪಟ್ಟಿ–B ಯಲ್ಲಿ ಅವರು ಬರೆದಿರುವ ಗ್ರಂಥಗಳ ಪಟ್ಟಿ ನೀಡಲಾಗಿದೆ.

| ಪಟ್ಟಿ – A | | ಪಟ್ಟಿ – B | |
|---|---|---|---|
| A. | ವರಾಹ ಮಿಹಿರ | i. | ಅಷ್ಟಾಂಗ ಸಂಗ್ರಹ |
| B. | ಆರ್ಯಭಟ | ii. | ಮೇಘದೂತ |
| C. | ವಿಷ್ಣು ಶರ್ಮ | iii. | ಬೃಹತ್ ಜಾತಕ |
| D. | ಕಾಳಿದಾಸ | iv. | ಸೂರ್ಯ ಸಿದ್ಧಾಂತ |
| | | v. | ಪಂಚ ತಂತ್ರ |

ಕೆಳಕಂಡವುಗಳಲ್ಲಿ ಸರಿಯಾಗಿ ಜೋಡಿಸಿರುವ ಗುಂಪು ಯಾವುದು ?

| | A | B | C | D |
|---|---|---|---|---|
| (1) | iii | iv | v | ii |
| (2) | i | ii | iii | iv |
| (3) | iv | i | ii | i |
| (4) | ii | iii | i | v |

98. ಈ ಕೆಳಗಿನ ಯಾವ ಗುಂಪಿನಲ್ಲಿ ದಕ್ಷಿಣ ಭಾರತದ ರಾಜ್ಯಗಳನ್ನು ಉತ್ತರದಿಂದ ದಕ್ಷಿಣಕ್ಕೆ ಅನುಕ್ರಮವಾಗಿ ಜೋಡಿಸಲಾಗಿದೆ ?

(1) ದ್ವಾರಸಮುದ್ರ, ಮಧುರೈ, ವಾರಂಗಲ್, ದೇವಗಿರಿ

(2) ದೇವಗಿರಿ, ವಾರಂಗಲ್, ದ್ವಾರಸಮುದ್ರ, ಮಧುರೈ

(3) ಮಧುರೈ, ವಾರಂಗಲ್, ದ್ವಾರಸಮುದ್ರ, ದೇವಗಿರಿ

(4) ವಾರಂಗಲ್, ದೇವಗಿರಿ, ಮಧುರೈ, ದ್ವಾರಸಮುದ್ರ

99. ಈ ಕೆಳಗಿನ ಹೇಳಿಕೆಗಳಲ್ಲಿ ಸರಿ (T) ಅಥವಾ ತಪ್ಪು (F) ಎಂಬ ಅನುಕ್ರಮವಾದ ಜೋಡಣೆಯನ್ನು ಆಯ್ಕೆ ಮಾಡಿ.

A. ಹೊಯ್ಸಳೇಶ್ವರ ದೇವಾಲಯ ದ್ವಿಕೂಟ ಮಾದರಿಯದು.

B. ಕಮಲಮಹಲ್ ಹಿಂದು ವಾಸ್ತು ಶೈಲಿಯ ಉದಾಹರಣೆ.

C. ಸೋಮನಾಥಪುರದ ಕೇಶವ ದೇವಾಲಯ ಚತುಷ್ಕೂಟ ಮಾದರಿಯದು.

D. ಪಿಸುಗುಟ್ಟುವ ಮೊಗಸಾಲೆ ಗೋಳಗುಮ್ಮಟದಲ್ಲಿದೆ.

(1) FFTT (2) TFTT (3) TTFF (4) TFFT

100. "ಅಕ್ಬರನು 'ದಿನ್-ಇ-ಲಾಹಿ' ಎಂಬ ಹೊಸ ಧರ್ಮವನ್ನು ಸ್ಥಾಪಿಸಿದನು."
ಈ ಕೆಳಗಿನ ಯಾವ ವಾಕ್ಯಗಳು ಈ ಧರ್ಮಕ್ಕೆ ಸರಿ ಹೊಂದುವುದಿಲ್ಲ ?

A. ಸರ್ವಧರ್ಮ ಸಾಮರಸ್ಯ ಪ್ರತಿಪಾದನೆ.

B. ಇಸ್ಲಾಂ ಧರ್ಮದ ಶ್ರೇಷ್ಠತೆಯನ್ನು ಎತ್ತಿಹಿಡಿಯುವುದು.

C. ಅಗ್ನಿಯನ್ನು ಪೂಜಿಸುವುದು.

D. ಈ ಧರ್ಮದ ಅನುಸರಣೆ ಕಡ್ಡಾಯಗೊಳಿಸುವುದು.

(1) A ಮತ್ತು C ಮಾತ್ರ (2) C ಮತ್ತು D ಮಾತ್ರ

(3) B ಮತ್ತು C ಮಾತ್ರ (4) B ಮತ್ತು D ಮಾತ್ರ

101. ಈ ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ.

A. ತಾಳಿಕೋಟೆ ಕದನ

B. ಮೊದಲನೇ ಪಾಣಿಪತ್ ಕದನ

C. ಶಿವಾಜಿಯ ಕಿರೀಟಧಾರಣೆ

D. ಮೊಹಮದ್-ಬಿನ್-ತೊಘಲಕ್‌ನ ರಾಜಧಾನಿ ಬದಲಾವಣೆ

(1) A, B, C, D (2) B, C, D, A (3) C, D, A, B (4) D, B, A, C

102. "ದ್ವೈತ" ಸಿದ್ಧಾಂತದ ತತ್ವ.

(1) ಜೀವಾತ್ಮ ಮತ್ತು ಪರಮಾತ್ಮ ಎರಡು ಬೇರೆ.

(2) ಜೀವಾತ್ಮ ಮತ್ತು ಪರಮಾತ್ಮ ಎರಡೂ ಒಂದೆ.

(3) ಜೀವಾತ್ಮ ಮತ್ತು ಪರಮಾತ್ಮ ಈ ಲೋಕದಲ್ಲಿ ಮಾತ್ರ ಬೇರೆ.

(4) ಜೀವಾತ್ಮ ಮತ್ತು ಪರಮಾತ್ಮ ಮೋಕ್ಷದಲ್ಲಿ ಬೇರೆ ಬೇರೆ.

103. ಕಲ್ಯಾಣದ ಕ್ರಾಂತಿಗೆ ಮೂಲ ಕಾರಣ

(1) ಅನ್ನ ದಾಸೋಹ

(2) ಅಂತರ್ ಜಾತೀಯ ವಿವಾಹ

(3) ಬಸವೇಶ್ವರರು ವೈದಿಕ ಧರ್ಮವನ್ನು ಖಂಡಿಸಿದ್ದು

(4) ಬಸವೇಶ್ವರರು ಮಂತ್ರಿ ಪದವಿ ತ್ಯಜಿಸಿದ್ದು

104. 1453 ರಲ್ಲಿ ಟರ್ಕರು ಕಾನ್‌ಸ್ಟಾಂಟಿನೋಪಲ್‌ನ್ನು ವಶಪಡಿಸಿಕೊಂಡಿದುದರ ಪರಿಣಾಮ

(1) ಫ್ರಾನ್ಸ್ ಮಹಾಕ್ರಾಂತಿಯ ಪ್ರಾರಂಭ.

(2) ಪಶ್ಚಿಮ ರೋಮನ್ ಸಾಮ್ರಾಜ್ಯದ ಪತನ.

(3) ಯುರೋಪಿನಲ್ಲಿ ಧಾರ್ಮಿಕ ಸುಧಾರಣೆ.

(4) ಯುರೋಪಿಯನ್ನರು ಭಾರತಕ್ಕೆ ಹೊಸ ಸಮುದ್ರ ಮಾರ್ಗ ಕಂಡು ಹಿಡಿದದ್ದು.

105. 3 ನೇ ಕರ್ನಾಟಿಕ್ ಕದನದಲ್ಲಿ ಫ್ರೆಂಚರು ಸೋಲನ್ನಪ್ಪದಿದ್ದರೇ

A. ಭಾರತದಲ್ಲಿ ಫ್ರೆಂಚರ ಸಾಮ್ರಾಜ್ಯ ಸ್ಥಾಪನೆಯಾಗುತ್ತಿತ್ತು.

B. ಫ್ರೆಂಚರು ಹಾಗೂ ಇಂಗ್ಲೀಷರ ನಡುವೆ ಸ್ನೇಹಬಾಂಧವ್ಯ ಏರ್ಪಾಡಾಗುತ್ತಿತ್ತು.

C. ಭಾರತದಲ್ಲಿ ಕೈಗಾರಿಕಾ ಕ್ರಾಂತಿಯಾಗುತ್ತಿತ್ತು.

D. ಫ್ರೆಂಚ್ ಭಾಷೆ ಭಾರತೀಯರ ಸಂಪರ್ಕ ಭಾಷೆಯಾಗುತ್ತಿತ್ತು.

(1) C ಮತ್ತು D ಮಾತ್ರ (2) B ಮತ್ತು D ಮಾತ್ರ

(3) A ಮತ್ತು D ಮಾತ್ರ (4) B ಮತ್ತು C ಮಾತ್ರ

106. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಈ ಕೆಳಗಿನ ಯಾವ ಘಟನೆ ಕಾರಣವಲ್ಲ ?

(1) ದಂಗೆಕೋರರಲ್ಲಿ ಸಮಾನ ಉದ್ದೇಶ ಇರಲಿಲ್ಲ.

(2) ಬ್ರಿಟೀಷರು ಜಾರಿಗೆ ತಂದ ದ್ವಿಸರ್ಕಾರ ಪದ್ಧತಿ.

(3) ಸುಸಜ್ಜಿತ ಸೇನೆ, ಹಾಗೂ ಇತರೆ ಸಂಪನ್ಮೂಲಗಳು ಬ್ರಿಟೀಷರಿಗೆ ಸಂಗ್ರಾಮ ಹತ್ತಿಕ್ಕಲು ಸಹಕರಿಸಿದವು.

(4) ಭಾರತದ ಅರಸರುಗಳು ಒಗ್ಗೂಡಿ ದಂಗೆಗೆ ಚಾಲನೆ ನೀಡಲಿಲ್ಲ.

107. ಝಾನ್ಸಿ ರಾಣಿ ಲಕ್ಷ್ಮೀಬಾಯಿ ಕಂಪನಿ ಸರ್ಕಾರದ ವಿರುದ್ಧ ದಂಗೆ ಏಳಲು ಕಾರಣವಾದ ನೀತಿ

(1) ಇಂಗ್ಲೀಷ್ ಶಿಕ್ಷಣ ನೀತಿ
(2) ದತ್ತು ಮಕ್ಕಳಿಗೆ ಹಕ್ಕಿಲ್ಲ
(3) ಸಬ್ಸಿಡಿಯರಿ ಅಲೆಯನ್ಸ್
(4) ವರ್ಣಭೇದ

108. ಕೆಳಗಿನ ಪಟ್ಟಿ – A ಮತ್ತು ಪಟ್ಟಿ – B ರಲ್ಲಿನ ಸರಿಯಾದ ಉತ್ತರವನ್ನು ಆರಿಸಿ. ಸೂಚಿಯನ್ನು ಉಪಯೋಗಿಸಿ.

| ಪಟ್ಟಿ – A | | ಪಟ್ಟಿ – B | |
|---|---|---|---|
| A. | ರಾಜಾರಾಮ್ ಮೋಹನ್ ರಾಯ್ | i. | ಅಸ್ಪೃಶ್ಯ ವರ್ಗದ ಬಾಲಕೀಯರ ಶಾಲೆ |
| B. | ದಯಾನಂದ ಸರಸ್ವತಿ | ii. | ಡೆಕ್ಕನ್ ಎಜುಕೇಷನ್ ಸೊಸೈಟಿ |
| C. | ಡಾ||. ಆನೀ ಬೆಸೆಂಟ್ | iii. | ಭಾರತದ ನವೋದಯ ಪಿತಾಮಹ |
| D. | ಜ್ಯೋತಿ ಬಾ ಫುಲೆ | iv. | ಥಿಯಸೋಫಿಕಲ್ ಸೊಸೈಟಿ |
| | | v. | ಶುದ್ಧಿ ಚಳುವಳಿ |

ಕೋಡ್ಸ್ :


| | A | B | C | D |
|---|---|---|---|---|
| (1) | iii | v | iv | i |
| (2) | v | iv | i | ii |
| (3) | iii | iv | v | ii |
| (4) | ii | v | iii | i |

109. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿಗಳ ಸರಿಯಾದ ಗುಂಪನ್ನು ಗುರುತಿಸಿ.

A. ವಿ.ಡಿ. ಸಾವರ್ಕರ್
B. ಬಾಲಗಂಗಾಧರ ತಿಲಕ್
C. ಕುದಿರಾಮ್ ಬೋಸ್
D. ಭಗತ್ ಸಿಂಗ್
E. ಲಾಲಾ ಲಜಪತ್ ರಾಯ್
F. ಬಿಪಿನ್ ಚಂದ್ರ ಪಾಲ್
G. ಚಂದ್ರಶೇಖರ್ ಆಜಾದ್
H. ಮದನ್‌ಲಾಲ್ ಡಿಂಗ್ರ

(1) A, B, C, H, G
(2) A, C, D, G, H
(3) B, E, F, H, D
(4) C, B, A, G, H

**110.** ಈ ಕೆಳಗೆ ನೀಡಿರುವ ಭಾರತದ ನಕ್ಷೆಯಲ್ಲಿ ಗುರುತಿಸಿರುವ ಸ್ಥಳಗಳನ್ನು ಹೊಂದಿಕೊಳ್ಳುವ ಉತ್ತರವನ್ನು ಆಯ್ಕೆ ಮಾಡಿ :




(i) ದಂಡಿ (ii) ಜಲಿಯನ್‌ವಾಲಾ ಬಾಗ್

(iii) ಇಂಫಾಲ್ (iv) ವಿಧುರಾಶ್ವಥ

(1) a – ii, b – iii, c – i, d – iv (2) a – ii, b – i, c – ii, d – iv

(3) a –i, b – ii, c – iii, d – iv (4) a – ii, b – i, c – iii, d – iv

**111.** 'X' ಎಂಬ ಒಂದು ಸ್ಥಳದ ಸ್ಥಳೀಯ ಕಾಲಮಾನ ರಾತ್ರಿ 7 ಗಂಟೆಯಾಗಿದೆ. 'Y' ಎಂಬ ಸ್ಥಳವು 'X' ನಿಂದ 150° ಪೂರ್ವ ರೇಖಾಂಶದಲ್ಲಿದ್ದರೆ ಆ ಸ್ಥಳದ ಸ್ಥಳೀಯ ವೇಳೆ ಮತ್ತು ದಿನವನ್ನು ಕಂಡು ಹಿಡಿಯಿರಿ.

(1) ಮಾರನೇ ದಿನದ 5 ಗಂಟೆ ಬೆಳಿಗ್ಗೆ (2) ಹಿಂದಿನ ದಿನದ 10 ಗಂಟೆ ರಾತ್ರಿ

(3) ಮಾರನೇ ದಿನದ 10 ಗಂಟೆ ಬೆಳಿಗ್ಗೆ (4) ಹಿಂದಿನ ದಿನದ ಸಾಯಂಕಾಲ 5 ಗಂಟೆ

**112.** ಈ ಕೆಳಗೆ ಕೊಟ್ಟಿರುವ ಶಿಲೆಗಳು ಮತ್ತು ಅವುಗಳ ರೂಪಾಂತರಗಳನ್ನು ಹೊಂದಿಸಿ ಸರಿಯಾದ ಆಯ್ಕೆಗಳನ್ನು ಗುರುತಿಸಿ.

| | A | | B |
|---|---|---|---|
| a. | ಗ್ರಾನೈಟ್ | i. | ಗ್ರಾಫೈಟ್ |
| b. | ಮರಳು ಶಿಲೆ | ii. | ಅಮೃತಶಿಲೆ |
| c. | ಕಲ್ಲಿದ್ದಲು | iii. | ನೀಸ್ |
| d. | ಸುಣ್ಣ ಕಲ್ಲು | iv. | ಸ್ಫಟಿಕ ಶಿಲೆ |
| | | v. | ವಜ್ರ |

| | a | b | c | d |
|---|---|---|---|---|
| (1) | ii | iii | iv | v |
| (2) | iii | iv | v | i |
| (3) | iii | iv | i | ii |
| (4) | iv | v | i | ii |

**113.** ಇತ್ತೀಚೆಗೆ ನೇಪಾಳದಲ್ಲಿ ಉಂಟಾದ ಭೂಕಂಪನಕ್ಕೆ ಕಾರಣ

(1) ಬಂಗಾಳ ಕೊಲ್ಲಿಯಲ್ಲಿ ಉಂಟಾದ ಚಂಡಮಾರುತ

(2) ಶಿಲಾ ಫಲಕಗಳ ಚಲನೆ

(3) ಜ್ವಾಲಾಮುಖಿಯ ಸ್ಫೋಟ

(4) ಅರಬ್ಬಿ ಸಮುದ್ರದಿಂದ ಬೀಸಿದ ನೈರುತ್ಯ ಮಾರುತಗಳು

**114.** ಓಜೋನ್ ವಲಯವು ಈ ಕೆಳಗೆ ಕೊಟ್ಟಿರುವ ವಾಯು ಮಂಡಲದ ಯಾವ ಸ್ತರದಲ್ಲಿದೆ ಗುರುತಿಸಿ.

(1) ಪರಿವರ್ತನಾ ಮಂಡಲ
(2) ಸಮೋಷ್ಣ ಮಂಡಲ
(3) ಬಾಹ್ಯ ಮಂಡಲ
(4) ಮಧ್ಯಾಂತರ ಮಂಡಲ

**115.** ಧ್ರುವ ಪ್ರದೇಶದಲ್ಲಿ ಸಾಗರಗಳ ಲವಣತೆ ಕಡಿಮೆ ಇರಲು ಕಾರಣ

(1) ಅತಿ ಕಡಿಮೆ ಮಳೆ
(2) ಅತಿ ಹೆಚ್ಚು ಬಾಷ್ಪೀಭವನ
(3) ಅತಿ ಕಡಿಮೆ ನದಿ ನೀರಿನ ಸೇರ್ಪಡೆ.
(4) ಅತಿ ಕಡಿಮೆ ಬಾಷ್ಪೀಭವನ

**116.** ಅತಿ ಹೆಚ್ಚು ಜೀವಾವಶೇಷ ಇಂಧನಗಳ ಉರಿಸುವಿಕೆಯಿಂದ ಉಂಟಾಗುವ ಪರಿಣಾಮ

(1) ಹಸಿರು ಮನೆ ಪರಿಣಾಮ
(2) ಮಣ್ಣು ಮಾಲಿನ್ಯ
(3) ಶಬ್ದ ಮಾಲಿನ್ಯ
(4) ಜಲ ಮಾಲಿನ್ಯ

**117.** ಈ ಕೆಳಗೆ ಕೆಲವು ವಾಕ್ಯಗಳನ್ನು ಕೊಟ್ಟಿದೆ.

A. ಮ್ಯಾನ್‌ಗ್ರೂವ್ ಅರಣ್ಯಗಳು ಭಾರತದ ಕೆಲವು ನದಿ ಮುಖಜ ಭೂಮಿಗಳಲ್ಲಿ ಕಂಡು ಬರುತ್ತವೆ.

B. ಸೂಚಿಪರ್ಣ (ಮೊನಚಾದ ಎಲೆಗಳುಳ್ಳ) ಕಾಡುಗಳು ಭಾರತದ ಉಷ್ಣವಲಯದಲ್ಲಿ ಕಂಡು ಬರುತ್ತವೆ.

C. ಖರ್ಜೂರದ ಮರಗಳು ಮರುಭೂಮಿ ಸಸ್ಯವರ್ಗದ ಒಂದು ಭಾಗವಾಗಿದೆ.

D. ನಿತ್ಯ ಹರಿದ್ವರ್ಣ ಕಾಡುಗಳು ಬಹಳ ದಟ್ಟವಾದ ಕಾಡುಗಳು.

ಮೇಲೆ ಕೊಟ್ಟಿರುವ ಯಾವ ಯಾವ ವಾಕ್ಯಗಳು ಸರಿಯಾಗಿವೆ ?

(1) A, B ಮತ್ತು C (2) A, C ಮತ್ತು D (3) B, C ಮತ್ತು D (4) A, B ಮತ್ತು D


**118.** ಈ ಕೆಳಗೆ ಕಾಲಂ – A ನಲ್ಲಿ ಬೆಳೆಗಳು ಹಾಗೂ ಕಾಲಂ – B ನಲ್ಲಿ ಬೆಳೆಯ ವಿಧಗಳನ್ನು ನೀಡಿದೆ.

| | A | | B |
|---|---|---|---|
| a. | ಗೋಧಿ | i. | ಪಾನೀಯ |
| b. | ಕಬ್ಬು | ii. | ನಾರಿನ |
| c. | ಟೀ | iii. | ತೋಟಗಾರಿಕಾ |
| d. | ಹತ್ತಿ | iv. | ಆಹಾರ |
| | | v. | ವಾಣಿಜ್ಯ |

ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಕ್ರಮದಲ್ಲಿದೆ ?

| | a | b | c | d |
|---|---|---|---|---|
| (1) | ii | iii | iv | v |
| (2) | i | iv | v | ii |
| (3) | iv | v | i | ii |
| (4) | iii | ii | v | i |

**119.**




ಭಾರತದ ನಕ್ಷೆಯಲ್ಲಿ ಕೊಟ್ಟಿರುವ ಸ್ಥಳಗಳನ್ನು ಸರಿಯಾಗಿ ಹೊಂದಿಸಿರುವ ಆಯ್ಕೆಯನ್ನು ಗುರುತಿಸಿ.

(1) a – ನರೋರ, b – ಜಮ್‌ಶೆಡ್‌ಪುರ, c – ಹಟ್ಟಿ ಚಿನ್ನದ ಗಣಿ, d – ಕಾಂಡ್ಲ

(2) a – ಜಮ್‌ಶೆಡ್‌ಪುರ, b – ನರೋರ, c – ಕಾಂಡ್ಲ, d – ಹಟ್ಟಿ ಚಿನ್ನದ ಗಣಿ

(3) a – ಹಟ್ಟಿ ಚಿನ್ನದ ಗಣಿ, b – ಕಾಂಡ್ಲ, c – ನರೋರ, d – ಜಮ್‌ಶೆಡ್‌ಪುರ

(4) a – ಹಟ್ಟಿ ಚಿನ್ನದ ಗಣಿ, b – ಕಾಂಡ್ಲ, c – ಜಮ್‌ಶೆಡ್‌ಪುರ, d – ನರೋರ

**120.** ಈ ಕೆಳಗಿನ ವಾಕ್ಯಗಳನ್ನು ಗಮನಿಸಿ, ಸರಿಯಾದ ಆಯ್ಕೆಯನ್ನು ಗುರುತಿಸಿ.

A. ದೇಶದ ವಿವಿದೆಡೆಗಳಿಂದ ಬೆಂಗಳೂರಿಗೆ ವಲಸೆ ಬರುವ ಜನರ ಸಂಖ್ಯೆ ಹೆಚ್ಚು.

B. ಭಾರತದ ಈಶಾನ್ಯ ರಾಜ್ಯಗಳಲ್ಲಿ ಉದ್ಯೋಗಾವಕಾಶ ಹೆಚ್ಚು.

(1) A ಮತ್ತು B ಎರಡೂ ತಪ್ಪು

(2) A ಸರಿ ಆದರೆ B ತಪ್ಪು

(3) A ಮತ್ತು B ಎರಡೂ ಸರಿ

(4) A ತಪ್ಪು ಆದರೆ B ಸರಿ

121. ಭಾರತೀಯ ಸಂವಿಧಾನದ ಯಾವ ಅನುಚ್ಛೇದವು ಅಸ್ಪೃಶ್ಯತೆಯನ್ನು ರದ್ದು ಮಾಡಿತು ?

(1) 15 ನೇ ಅನುಚ್ಛೇದ
(2) 17 ನೇ ಅನುಚ್ಛೇದ
(3) 21 ನೇ ಅನುಚ್ಛೇದ
(4) 38 ನೇ ಅನುಚ್ಛೇದ

122. ರಾಜ್ಯ ಶಾಸ್ತ್ರದ ಪಿತಾಮಹ

(1) ಅರಿಸ್ಟಾಟಲ್
(2) ಸಾಕ್ರೆಟಿಸ್
(3) ಪ್ಲೇಟೋ
(4) ಅಬ್ರಾಹಂ ಲಿಂಕನ್

123. ಈ ಕೆಳಗೆ ಭಾರತದ ಕೆಲವು ಬುಡಕಟ್ಟು ಜನಾಂಗದ ಗುಂಪನ್ನು ನೀಡಿದೆ. ಈ 4 ಆಯ್ಕೆಗಳಲ್ಲಿ ದಕ್ಷಿಣ ಭಾರತ ಬುಡಕಟ್ಟಿನ ಗುಂಪನ್ನು ಗುರುತಿಸಿ.

| | | | | | | | |
|---|---|---|---|---|---|---|---|
| A. | ಚಕ್ಮಾ | B. | ಸೋಲಿಗ | C. | ಕೋಟ | D. | ಸಿದ್ಧಿ |
| E. | ಗಾರೋ | F. | ಖಾಸಿ | G. | ಕಚಾರಿ | H. | ತೊಡವ |

(1) A, B, C, D
(2) B, D, G, H
(3) B, C, D, H
(4) H, G, C, D

124. "ಖಾಸಗಿ ಒಡೆತನಕ್ಕೆ ಆಸ್ಪದವಿಲ್ಲ". ಲಕ್ಷಣವನ್ನು ಹೊಂದಿರುವ ಸರ್ಕಾರವು ಈ ಮುಂದಿನವುಗಳಲ್ಲಿ ಯಾವುದು ?

(1) ಸಂವಿಧಾನಾತ್ಮಕ ಚಕ್ರಾಧಿಪತ್ಯ
(2) ಸೈನಿಕ ಸರ್ವಾಧಿಕಾರಿ
(3) ಪ್ರಜಾ ಪ್ರಭುತ್ವ
(4) ಕಮ್ಯುನಿಸ್ಟ್

125. ಈ ಕೆಳಗೆ ಕೊಟ್ಟಿರುವ ಅಧಿಕಾರಿಗಳು ಮತ್ತು ಅವರು ಕಾರ್ಯ ನಿರ್ವಹಿಸುವ ಸ್ಥಳೀಯ ಸರ್ಕಾರ-ಗಳೊಂದಿಗೆ ಹೊಂದಿಸಿ ಗುರುತಿಸಿ.

| | A | | B |
|---|---|---|---|
| a. | ಕಮಿಷನರ್ | i. | ಜಿಲ್ಲಾ ಪಂಚಾಯಿತಿ |
| b. | ಚೀಫ್ ಆಫೀಸರ್ | ii. | ನಗರ ಪಾಲಿಕೆಗಳು |
| c. | ಚೀಫ್ ಎಕ್ಸಿಕ್ಯುಟಿವ್ ಆಫೀಸರ್ | iii. | ಗ್ರಾಮ ಪಂಚಾಯಿತಿ |
| d. | ಎಕ್ಸಿಕ್ಯುಟಿವ್ ಆಫೀಸರ್ | iv. | ಪಟ್ಟಣ ಪೌರಸಭೆಗಳು |
| | | v. | ತಾಲ್ಲೂಕು ಪಂಚಾಯಿತಿ |

| | a | b | c | d |
|---|---|---|---|---|
| (1) | iii | ii | iv | v |
| (2) | ii | iv | i | v |
| (3) | i | iii | v | iv |
| (4) | v | iii | ii | iv |

126. ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ನೀತಿಯ ಬುನಾದಿ

(1) ಮೂಲಭೂತ ಹಕ್ಕುಗಳು
(2) ಮೂಲಭೂತ ಕರ್ತವ್ಯಗಳು
(3) ನಿರ್ದೇಶಕ ತತ್ವಗಳು
(4) ಪೌರತ್ವ ನಿರ್ಧಾರಿಸುವ ತತ್ವಗಳು

127. ಈ ಕೆಳಗೆ ನೀಡಿರುವ ವಾಕ್ಯಗಳಲ್ಲಿ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದಂತೆ ಯಾವುದು ಸರಿಯಲ್ಲ ?
(1) ಹಣಕಾಸಿನ ಮಸೂದೆಯನ್ನು ಮೊದಲು ವಿಧಾನ ಪರಿಷತ್ತಿನಲ್ಲಿ ಮಂಡಿಸುವರು.
(2) ರಾಜ್ಯದ ಮುಖ್ಯಮಂತ್ರಿಗಳು ಬಹುಮತ ಪಡೆದ ಪಕ್ಷದ ನಾಯಕರಾಗಿರುತ್ತಾರೆ.
(3) ಶಿಕ್ಷಕರ ಕ್ಷೇತ್ರದ ಪ್ರತಿನಿಧಿಗಳು ವಿಧಾನ ಪರಿಷತ್‌ನ ಸದಸ್ಯರಾಗಿರುತ್ತಾರೆ.
(4) ರಾಜ್ಯದಲ್ಲಿ ಸಂವಿಧಾನಿಕ ಬಿಕ್ಕಟ್ಟು ಉಂಟಾದಾಗ ರಾಷ್ಟ್ರಪತಿ ಆಡಳಿತ ಕೋರಬಹುದು.

128. ಈ ಕೆಳಗಿನ ನ್ಯಾಯಾಲಯಗಳನ್ನು, ಕಾರ್ಯವ್ಯಾಪ್ತಿ ಆಧಾರದ ಮೇಲೆ ಅವರೋಹಣ ರೀತಿಯಲ್ಲಿ ಜೋಡಿಸಿರುವ ಗುಂಪನ್ನು ಗುರುತಿಸಿ.
A. ಮ್ಯಾಜಿಸ್ಟ್ರೇಟ್ ನ್ಯಾಯಾಲಯ
B. ರಾಜ್ಯ ಉಚ್ಚ ನ್ಯಾಯಾಲಯ
C. ಸರ್ವೋಚ್ಚ ನ್ಯಾಯಾಲಯ
D. ಸೆಷನ್ಸ್ ನ್ಯಾಯಾಲಯ
(1) A, B, C, D
(2) C, D, A, B
(3) D, C, B, A
(4) C, B, D, A

129. ಭಾರತವು
A. ಸಮಾಜವಾದಿ
B. ಜಾತ್ಯಾತೀತ
C. ಸಾರ್ವಭೌಮ
D. ಪ್ರಜಾಸತ್ತಾತ್ಮಕ ಗಣರಾಜ್ಯ

ರಾಷ್ಟ್ರ ಎಂದು ಸಂವಿಧಾನದ ಪ್ರಸ್ತಾವನೆಯಲ್ಲಿ ನಮೂದಿಸಿರುವಂತೆ ಸರಿಯಾದ ಸರಣಿಯನ್ನು ಗುರುತಿಸಿ.
(1) C, A, B, D
(2) B, C, A, D
(3) C, A, D, B
(4) A, B, C, D

130. ಭಾರತದಲ್ಲಿ ಮಾಹಿತಿ ಹಕ್ಕು ಕಾಯ್ದೆ ಜಾರಿಗೆ ಬಂದ ವರ್ಷ
(1) 2000 (2) 2005 (3) 2008 (4) 2014

131. ಸಮಾಜ ವಿಜ್ಞಾನ ಬೋಧನೆಗೆ ಸಂಬಂಧಿಸಿದ ಮುಖ್ಯ ಅಂಶಗಳನ್ನು ನಾವು ಈ ಮೂಲಾಧಾರದಿಂದ ಪಡೆಯಬಹುದು.
(1) ಮೂಲ ಶಿಕ್ಷಣ ಪದ್ಧತಿ
(2) ಕೊಠಾರಿ ಆಯೋಗ ವರದಿ
(3) ಪ್ರೌಢ ಶಿಕ್ಷಣ ಆಯೋಗ ವರದಿ
(4) ರಾಷ್ಟ್ರೀಯ ಶಿಕ್ಷಣ ನೀತಿ

132. "ಶೈಕ್ಷಣಿಕ ಚಟುವಟಿಕೆ" ಯ ಮೂಲ ಅರ್ಥ
(1) ಮೌಲ್ಯಾಧಾರಿತ ಕಾರ್ಯ
(2) ವೀಕ್ಷಣಾಧಾರಿತ ಕಾರ್ಯ
(3) ಉದ್ದೇಶಾಧಾರಿತ ಕಾರ್ಯ
(4) ಚಿಂತನಾಧಾರಿತ ಕಾರ್ಯ

133. "ಸಮಾಜ ವಿಜ್ಞಾನ" ಬೋಧನೆಯ ಮೂಲ ಉದ್ದೇಶ
(1) ವೃತ್ತಿಯಲ್ಲಿ ಬೆಳವಣಿಗೆ
(2) ಜವಾಬ್ದಾರಿಯುತ ಪೌರತ್ವದ ಬೆಳವಣಿಗೆ
(3) ಜ್ಞಾನವನ್ನು ವೃದ್ಧಿಸುವಿಕೆ
(4) ಜೀವನ ಸೌಲಭ್ಯಗಳ ಬೆಳವಣಿಗೆ

134. ವಿವಿಧ ಹಬ್ಬಗಳನ್ನು ಸಾಂಕೇತಿಕವಾಗಿ ಆಚರಿಸುವುದರ ಪ್ರಾಮುಖ್ಯತೆ

(1) ಧಾರ್ಮಿಕ ಸುಧಾರಣೆ
(2) ರಾಷ್ಟ್ರೀಯತೆ
(3) ಸಂಸ್ಕೃತಿಯ ವರ್ಗಾವಣೆ
(4) ಪೌರಪ್ರಜ್ಞೆ

135. ಸಮಾಜ ವಿಜ್ಞಾನ ಬೋಧನೆಯಿಂದ ಮಕ್ಕಳಲ್ಲಿ ಬೆಳೆಸಬಹುದಾದ ಮುಖ್ಯ ಸಾಮರ್ಥ್ಯವೆಂದರೆ

(1) ಜ್ಞಾನ ಬೆಳವಣಿಗೆ
(2) ವಿಮರ್ಶಾತ್ಮಕ ಚಿಂತನೆ
(3) ಕೌಶಲ್ಯ ಬೆಳವಣಿಗೆ
(4) ಧಾರ್ಮಿಕ ಆಸಕ್ತಿ ಬೆಳವಣಿಗೆ

136. "ಸಿ.ಸಿ.ಇ. / ನಿರಂತರ ವ್ಯಾಪಕ ಮೌಲ್ಯಮಾಪನ" ಎಂದರೆ

(1) ಮಗುವಿನ ಕಲಿಕೆಯ ಕಾರ್ಯಕ್ಷಮತೆಯ ಮಾಪನ.
(2) ಮಗುವಿನ ಸರ್ವತೋಮುಖ ಬೆಳವಣಿಗೆಯ ಮಾಪನ.
(3) ಮಗುವಿನ ಶ್ರೇಣಿ ಆಧಾರಿತ ಕಲಿಕೆಯ ಮಾಪನ.
(4) ಮಗುವಿನ ವಿಷಯಗ್ರಹಿಕೆಯ ಮಾಪನ.

137. ಹರ್ಷವರ್ಧನನ ಕಾಲದ ಪ್ರಸಿದ್ಧ ವಿಶ್ವವಿದ್ಯಾಲಯ

(1) ಉಜ್ಜೈನಿ
(2) ತಕ್ಷಶಿಲಾ
(3) ನಳಂದ
(4) ವಿಕ್ರಮಶೀಲ

138. "ಸಮಾಜ ವಿಜ್ಞಾನ", "ಸಮಾಜ ಅಧ್ಯಯನ" ದಿಂದ ಈ ಮುಖ್ಯ ಅಂಶಗಳಿಂದ ಭಿನ್ನವಾಗಿದೆ.

(1) ಸಮಾಜ ವಿಜ್ಞಾನ ಘಟನೆಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ ಅದರ ಆಧಾರವಾಗಿ ನಿರೂಪಿತವಾಗಿದೆ.
(2) ಸಮಾಜ ವಿಜ್ಞಾನ ಮಾನವನ ದಿನನಿತ್ಯ ಚಟುವಟಿಕೆಯ ಪ್ರತಿರೂಪವಾಗಿದೆ.
(3) ಸಮಾಜ ವಿಜ್ಞಾನ ಹಲವಾರು ಇತರೆ ವಿಷಯಗಳ ಅಧ್ಯಯನಕ್ಕೆ ಅವಕಾಶ ನೀಡುತ್ತದೆ.
(4) ಸಾಮಾಜಿಕ ಮೌಲ್ಯಗಳ ಬೆಳವಣಿಗೆ ಹಾಗೂ ಅವುಗಳ ಅಭ್ಯಾಸಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದೆ.

139. NCF 2005 ರ ಪ್ರಕಾರ "ಸಮಾಜ ವಿಜ್ಞಾನ" ಬೋಧನೆಯ ಮುಖ್ಯ ಆದ್ಯತೆ

(1) ಐತಿಹಾಸಿಕ ಅಂಶಗಳ ಆಧಾರದ ಮೇಲೆ ಮಾನವನು ತನ್ನ ಪಾತ್ರವನ್ನು ಗುರುತಿಸಲು ಅನುವು ಮಾಡಿಕೊಡುವುದು.
(2) ಸಮಾಜ ವಿಜ್ಞಾನ ಬೋಧನೆ ಮೂಲಕ ನೈತಿಕ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವುದು.
(3) ಸಾಮಾಜಿಕ ಪರಿಸರದಲ್ಲಿ ಮಾನವನ ವಿವಿಧ ಚಟುವಟಿಕೆಗಳನ್ನು ಬೆಳೆಸುವುದು.
(4) ಸಾಮಾಜಿಕ ಪ್ರಕ್ರಿಯೆಯಲ್ಲಿ ಮಾನವ ತನ್ನನ್ನು ತಾನೇ ತೊಡಗಿಸಿಕೊಳ್ಳುವುದು.

140. "ಇತ್ತೀಚಿನ ದಿನಗಳಲ್ಲಿ ಉಪನ್ಯಾಸ ವಿಧಾನ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿದೆ" ಇದನ್ನು ಸುಧಾರಿಸಲು ಉಪನ್ಯಾಸಕರು ಈ ಕ್ರಮವನ್ನು ಅನುಸರಿಸಬಹುದು.

(1) ಉಪನ್ಯಾಸವನ್ನು ಆದಷ್ಟು ಕಡಿತಗೊಳಿಸುವುದು.

(2) ಭಾಷಣದ ಟಿಪ್ಪಣಿಯನ್ನು ಬರೆಸುವುದು.

(3) ವಿವಿಧ ಘಟನೆಗಳು, ಉದಾಹರಣೆಗಳು, ಅನುಭವಗಳು ಹಾಗೂ ಚರ್ಚೆ ಇತ್ಯಾದಿಗಳನ್ನು ವೃದ್ಧಿಸುವುದು.

(4) ಉಪನ್ಯಾಸಕರು ತಮ್ಮ ಪಾಠದ ದೊಡ್ಡ ಟಿಪ್ಪಣಿ ತಯಾರಿಸಬೇಕು.

141. "ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ" ಈ ನಾಟಕವನ್ನು ವಿದ್ಯಾರ್ಥಿಗಳಿಂದ ಪ್ರಸ್ತುತ ಪಡಿಸುವಾಗ ಬೆಳೆಸ-ಬಹುದಾದ ಸಮಾಜ ವಿಜ್ಞಾನ ಬೋಧನೆಯ ಮುಖ್ಯ ಉದ್ದೇಶ

(1) ದೇಶ ಪ್ರೇಮ
(2) ರಾಷ್ಟ್ರೀಯ ಭಾವೈಕ್ಯತೆ
(3) ಐತಿಹಾಸಿಕ ಚಿಂತನೆ
(4) ಸಾಮಾಜಿಕ ನ್ಯಾಯ

142. ವಿದ್ಯಾರ್ಥಿಗಳಲ್ಲಿ ನಕ್ಷೆ ಬಿಡಿಸುವ ಕೌಶಲ ಮೂಡಿಸುವ ಮುನ್ನ ಈ ಸಾಮರ್ಥ್ಯವನ್ನು ಬೆಳೆಸುವುದು ಉತ್ತಮ

(1) ಭೌಗೋಳಿಕ ಗಡಿಗಳು
(2) ಮನಸ್ಸಿನಲ್ಲಿ ನಕ್ಷೆಯನ್ನು ಸಾಕಾರಗೊಳಿಸುವುದು
(3) ರಾಜಕೀಯ ಪ್ರಭಾವ
(4) ಐತಿಹಾಸಿಕ ಪ್ರಾಮುಖ್ಯತೆಯ ಅಧ್ಯಯನ

143. ಒಂದು ಒಳ್ಳೆಯ ಯೋಜನೆ ಒಳಗೊಂಡಿರಬೇಕಾದುದು

A. ಉತ್ತಮ ಗುಣಮಟ್ಟ
B. ಉತ್ತಮ ಶೈಕ್ಷಣಿಕ ಅನುಭವ
C. ಲಭ್ಯವಿರುವ ಸಂಪನ್ಮೂಲಗಳ ಬಳಕೆ
D. ಲಾಭದಾಯಕತೆ

(1) A ಮತ್ತು B ಮಾತ್ರ
(2) B ಮತ್ತು C ಮಾತ್ರ
(3) C ಮತ್ತು D ಮಾತ್ರ
(4) D ಮತ್ತು A ಮಾತ್ರ

144. ಜೀವನ ಚರಿತ್ರಾ ಬೋಧನಾ ವಿಧಾನದ ಮುಖ್ಯ ಉದ್ದೇಶ

(1) ವಿವಿಧ ಚಾರಿತ್ರಿಕ ವ್ಯಕ್ತಿಗಳ ಪರಿಚಯ ಮೂಡಿಸುವುದು.

(2) ವಿವಿಧ ಚಾರಿತ್ರಿಕ ವ್ಯಕ್ತಿಗಳ ಜೀವನದ ಉನ್ನತ ಮೌಲ್ಯಗಳ ಬಗ್ಗೆ ತಿಳುವಳಿಕೆ ಮೂಡಿಸುವುದು

(3) ವಿವಿಧ ಚಾರಿತ್ರಿಕ ವ್ಯಕ್ತಿಗಳ ಸಾಧನೆಗಳನ್ನು ಗುರುತಿಸುವುದು.

(4) ವಿವಿಧ ಚಾರಿತ್ರಿಕ ವ್ಯಕ್ತಿಗಳಂತೆ ತಾವೂ ಸಾಧನೆ ಮಾಡಲು ಸ್ಫೂರ್ತಿ ಮೂಡಿಸುವುದು.

145. "ಪ್ರಚಲಿತ ವಿದ್ಯಮಾನಗಳನ್ನು ತರಗತಿಗಳಲ್ಲಿ ಚರ್ಚಿಸಲೇ ಬೇಕು" ಈ ಮೇಲಿನ ಹೇಳಿಕೆಯಡಿಯಲ್ಲಿ "ಸ್ವಚ್ಛ ಭಾರತ ಅಭಿಯಾನ" ದ ಬಗ್ಗೆ ಚರ್ಚಿಸುವಾಗ ವಿದ್ಯಾರ್ಥಿಗಳಿಂದ ಅಪೇಕ್ಷಿತ ವರ್ತನೆ

(1) ಆಸಕ್ತಿ ಕೆರಳಿಸುವುದು

(2) ಪ್ರಚಲಿತ ವಿದ್ಯಮಾನಗಳನ್ನು ತಿಳಿದುಕೊಳ್ಳುವುದು

(3) ಸಾಮಾಜಿಕ ಪ್ರಜ್ಞೆ ಮೂಡಿಸುವುದು

(4) ಪ್ರಚಲಿತ ಸಮಸ್ಯೆಗಳ ನಿವಾರಣೆಗೆ ಸ್ಪಂದಿಸುವ ಮನೋಭಾವ ಬೆಳೆಸುವುದು

146. ಶಾಲೆಗಳಲ್ಲಿ 'ವಿದ್ಯಾರ್ಥಿ ಸಂಸತ್' ನ್ನು ರಚಿಸುವುದು ಇದಕ್ಕೆ ಉದಾಹರಣೆ

(1) ಮೂಲಾಧಾರ ಪದ್ಧತಿ
(2) ಯೋಜನಾ ಪದ್ಧತಿ
(3) ಚರ್ಚಾ ಪದ್ಧತಿ
(4) ಉಪನ್ಯಾಸ ಪದ್ಧತಿ

147. ಇತಿಹಾಸದ ಪಠ್ಯವಸ್ತುವಿನಲ್ಲಿ "ವಿಶ್ವ ಸಂಸ್ಥೆ ಮತ್ತು ಅದರ ಸಾಧನೆ" ಈ ವಿಷಯವನ್ನು ಸೇರಿಸಿರುವುದರ ಮುಖ್ಯ ಉದ್ದೇಶ, ವಿದ್ಯಾರ್ಥಿಗಳಲ್ಲಿ

(1) ರಾಷ್ಟ್ರ ಪ್ರೇಮ ಮೂಡಿಸುವುದು
(2) ಅಂತರರಾಷ್ಟ್ರೀಯ ಮನೋಭಾವನೆ ಮೂಡಿಸುವುದು
(3) ವಿದೇಶಾಂಗ ನೀತಿ ಬಗ್ಗೆ ತಿಳುವಳಿಕೆ ಮೂಡಿಸುವುದು
(4) ಅಂತರರಾಷ್ಟ್ರೀಯ ಪ್ರವಾಸೋದ್ಯಮ ಬೆಳೆಸುವುದು

148. "ಇತಿಹಾಸವು ಹಲವಾರು ಮಹಾ ನಾಯಕರುಗಳು ಹಾಗೂ ವಿಶೇಷ ಘಟನೆಗಳನ್ನು ಮುಂದಿನ ಪೀಳಿಗೆಗೆ ಸ್ಮರಿಸಲು ಇರುವ ದಾಖಲೆ" ಹಾಗಿದ್ದಲ್ಲಿ ಇತಿಹಾಸ ಬೋಧನೆಯ ಉತ್ತಮ ಬೋಧನಾ ವಿಧಾನ

(1) ಮೂಲಾಧಾರ ಪದ್ಧತಿ
(2) ಉಪನ್ಯಾಸ ಪದ್ಧತಿ
(3) ಯೋಜನಾ ಪದ್ಧತಿ
(4) ಜೀವನಚರಿತ್ರ ಪದ್ಧತಿ

149. ಸಮಾಜ ವಿಜ್ಞಾನದ ಒಂದು ಉತ್ತಮ ಪ್ರಶ್ನೆಪತ್ರಿಕೆ ಈ ಅಂಶ ಒಳಗೊಂಡಿರಬೇಕು.

(1) ಒಳ್ಳೆಯ ಗುಣಮಟ್ಟದ ಮುದ್ರಣ
(2) ಒಳ್ಳೆಯ ಗುಣಮಟ್ಟದ ಪ್ರಶ್ನೆಗಳು
(3) ಹೆಚ್ಚು ಕಠಿಣ ಪ್ರಶ್ನೆಗಳನ್ನು ಹೊಂದಿರಬೇಕು
(4) ವಿಷಯ, ಉದ್ದೇಶಗಳು ಹಾಗೂ ವಿವಿಧ ಮಾದರಿ ಪ್ರಶ್ನೆಗಳ ಸಮ್ಮಿಲನವಾಗಿರಬೇಕು

150. "ರಾಷ್ಟ್ರೀಯ ಭಾವೈಕ್ಯತೆ ದೇಶದ ಎಲ್ಲಾ ಜನರನ್ನು ಒಂದುಗೂಡಿಸುವ ಭಾವನೆ". ಈ ವಿಷಯದ ಬಗ್ಗೆ ಬೋಧಿಸುವಾಗ ಸಮಾಜ ವಿಜ್ಞಾನ ಶಿಕ್ಷಕರಿಗೆ ಶಾಲೆಯಲ್ಲಿ ಸಹಕರಿಸುವ ಚಟುವಟಿಕೆಗಳು

A. ರಾಷ್ಟ್ರೀಯ ಹಬ್ಬಗಳ ಆಚರಣೆ
B. ರಾಷ್ಟ್ರ ಗೀತೆ ಗಾಯನ
C. ತರಗತಿಗಳಲ್ಲಿ ನಾಯಕರುಗಳ ಆಯ್ಕೆ
D. ಶಾಲೆಯಲ್ಲಿ ನೃತ್ಯೋತ್ಸವ

(1) A ಮತ್ತು B ಮಾತ್ರ
(2) A ಮತ್ತು C ಮಾತ್ರ
(3) A, B ಮತ್ತು C
(4) A, B ಮತ್ತು D